CC-0. In Public Domain. Digitization by eGangotri

ಗಿರಿ ಸ್ಪಂದನ



ದ. ರಾಜಣ್ಣ

CC-0. In Public Domain. Digitization by eGangotri

CC-0. In Public Domain. Digitization by eGangotri

ಗಿರಿ ಸ್ಪಂದನ

ಕವನ ಸಂಕಲನ

ದ. ರಾಜಣ್ಣ
'ಶ್ರೀಗುರು'

ಶ್ರೀ ಗುರು ಪ್ರಕಾಶನ
ಶೃಂಗೇರಿ - 577 139

CC-0. In Public Domain. Digitization by eGangotri

GIRI SPANDANA

A collection of poems written by D. Rajanna

Published by Sri Guru Prakashana, SRINGERI

Pages : 48+12   Price : Rs. 6-00

ಪ್ರಥಮ ಮುದ್ರಣ ೧೯೮೬

ಒಂದು ಸಾವಿರ ಪ್ರತಿಗಳು

ಎಲ್ಲಾ ಹಕ್ಕುಗಳೂ ಲೇಖಕರದು.

ಬೆಲೆ : ಆರು ರೂಪಾಯಿಗಳು

ಮುದ್ರಕರು :

ಪಾರ್ವತೀ ಪವರ್ ಪ್ರಿಂಟರ್ಸ್

ಶೃಂಗೇರಿ – ೫೭೭ ೧೩೯

CC-0. In Public Domain. Digitization by eGangotri

ಸಂದೇಶ

श्री श्री जगद्गुरु शङ्कराचार्य महासंस्थानम्,

दक्षिणाम्नाय श्री शारदापीठम् शृङ्गेरी-५७७ १३९

PRIVATE SECRETARY
To His Holiness
Sri Jagadguru Shankaracharya
Dakshinamnaya Sri Sharada Peetham
SRINGERI 577 139 (Karnataka)

Camp : SRINGERI

Date : 5-3-1987

ಶ್ರೀ ದ. ರಾಜಣ್ಣನವರಿಗೆ ನಮಸ್ಕಾರಗಳು.

ನಿಮ್ಮ ಚೊಚ್ಚಲ ಕವನ ಸಂಕಲನ 'ಗಿರಿ ಸ್ಪಂದನ'ದಲ್ಲಿನ ಕೆಲವು ಕವನಗಳನ್ನು ಶ್ರೀ ಶ್ರೀ ಜಗದ್ಗುರು ಮಹಾಸ್ವಾಮಿಗಳವರ ಅವಗಾಹನೆಗೆ ತರಲಾಗಿದೆ.

ನಮ್ಮ ತೀವ್ರವಾದ ಭಾವನಾನುಭವಗಳ ಅಭಿವ್ಯಕ್ತಿಗೆ ಕಾವ್ಯದಷ್ಟು ಉತ್ತಮವಾದ ಸಾಧನ ಬೇರೊಂದಿಲ್ಲ. ಈ ಮಾಧ್ಯಮವನ್ನು ಸಮರ್ಥವಾಗಿ ಬಳಸಿಕೊಳ್ಳುವುದರಲ್ಲಿ ಕವಿಯ ಪ್ರತಿಭೆಯ ಮಹತ್ವವಿದೆ.

ನೀವು ಶೃಂಗೇರಿಯ ಪರಿಸರದಿಂದ ಪ್ರಭಾವಿತರಾಗಿರುವುದು ಅನೇಕ ಕವನಗಳಿಂದ ಸ್ಪಷ್ಟವಾಗಿ ವ್ಯಕ್ತಪಟ್ಟಿದೆ.

ನಿಮ್ಮ ಈ ಪ್ರಯತ್ನ ಯಶಸ್ವಿಯಾಗಿ, ನಿಮ್ಮ ಪ್ರತಿಭೆ ಅರಳಿ, ನಿಮ್ಮಿಂದ ಉತ್ತಮ ರೀತಿಯ ಕಾವ್ಯಗಳು ಬರಲೆಂದು ಶ್ರೀ ಶ್ರೀ ಜಗದ್ಗುರು ಮಹಾಸ್ವಾಮಿಗಳವರು ಆಶೀರ್ವದಿಸಿರುತ್ತಾರೆ.

ಇಂತು ನಿಮ್ಮ ವಿಶ್ವಾಸದ,

(ಸಹಿ) **ಟಿ. ವಿ. ಗಿರಿಧರಶಾಸ್ತ್ರೀ**

CC-0. In Public Domain. Digitization by eGangotri

ಅನಿಸಿಕೆ

ನನ್ನ ಆತ್ಮೀಯ ತರುಣ ಮಿತ್ರ ಶ್ರೀ ದ. ರಾಜಣ್ಣ ಅವರ 'ಗಿರಿ ಸ್ಪಂದನ' ಕೃತಿಯನ್ನು ನೋಡಿ ತುಂಬಾ ಸಂತೋಷವಾಗಿದೆ. ಮುಕ್ತ ಮನಸ್ಸಿನ, ಸರಳ ಸೌಜನ್ಯದ ಈ ತರುಣ ಕವಿ ನಾವು ಮಾಡುವ ಯಾವುದೇ ಕೆಲಸದಲ್ಲಿ ಶ್ರದ್ಧೆ ಆಸಕ್ತಿ ಇದ್ದರೆ ಫಲ ತಾನೇತಾನಾಗಿ ಲಭಿಸುತ್ತದೆಂದು ನಂಬಿದವ. ಹರೆಯದ ವಯಸ್ಸಿಗನುಗುಣವಾದ ಭಾವನೆಗಳೇ ಇವರ ಹಲವು ಕವಿತೆಗಳಲ್ಲಿ ವ್ಯಕ್ತವಾಗಿದ್ದರೂ ಇದರಾಚೆಗೂ ಸಮಸ್ಯೆ, ಸಂಕಟ, ನೋವು ನಲಿವುಗಳಿವೆ ಎಂಬುದರ ಅರಿವನ್ನು, ಅನುಭವವನ್ನು ಇಲ್ಲಿ ಅನೇಕ ಕವನಗಳು ಸಾದರಪಡಿಸುತ್ತವೆ. ಈ ಸಂಕಲನದಲ್ಲಿರುವವೆಲ್ಲವೂ ಶ್ರೇಷ್ಠ ಎಂದು ನಾನು ಹೇಳುತ್ತಿಲ್ಲ; ಅವರೂ ಹಾಗೆ ತಿಳಿದಿಲ್ಲ. ಆದರೂ ಬೆಳೆಯಬೇಕಾದ ಕವಿಗೆ ಇರುವ ಎಲ್ಲ ಲಕ್ಷಣಗಳೂ ಇವರಿಗಿದೆ. ಮುಖ್ಯವಾಗಿ ಮನುಷ್ಯ ಮನುಷ್ಯರನ್ನು ಕಾಣುವ ಸಂಬಂಧ, ನಮ್ಮ ಓದು ಏನನ್ನು ಕೊಡುತ್ತಿದೆ? ಹಳ್ಳಿಗರ ಮುಗ್ಧ ಬದುಕು ಇವತ್ತೇನಾಗಿದೆ? ಇಂತಹ ವಿಚಾರಗಳನ್ನು ಕುರಿತು ಕವಿ ಚಿಂತಿಸುವಾಗಲೆಲ್ಲ ಬಹಳ ಭಾವಾವೇಶಕ್ಕೆ ಒಳಗಾದರೂ, ಓದುಗರೊಡನೆ ಹಲವಾರು ವಿಷಯಗಳನ್ನು ಹಂಚಿಕೊಳ್ಳುತ್ತಾ, ಕತ್ತಲಲ್ಲಿ ಮಿಂಚಿ ಮಾಯವಾಗುವ "ಮಿಂಚುಹುಳುವಿನಂತೆ" ಹೊಳವನ್ನಷ್ಟೇ ನಮಗೆ ನೀಡಿ, ನೋವನ್ನೆಲ್ಲಾ ತಾವೇ ನುಂಗುತ್ತಾರೆ.

ಹಲವು ಹಂಬಲ ಹೊತ್ತ ಉತ್ಸಾಹಿ ಕವಿಯ ಈ ಚೊಚ್ಚಲ ಕೃತಿಯನ್ನು ಕನ್ನಡ ಕಾವ್ಯ ಪ್ರಪಂಚದ ಸಹೃದಯಿಗಳು ಅಕ್ಕರೆಯಿಂದ ಸ್ವೀಕರಿಸಿ, ಇನ್ನೂ ಇವರಿಂದ ಹತ್ತಾರು ಒಳ್ಳೆಯ ಸಂಕಲನಗಳು ಹೊರಬರುವಂತೆ ಪ್ರೋತ್ಸಾಹಿಸಿ ಸಹಕರಿಸುತ್ತಾರೆಂದು, ಈ ಹಾದಿಯಲ್ಲಿ ಇವರಿಗೆ ಯಶಸ್ಸು ಲಭಿಸಲೆಂದು ಮನತುಂಬಿ ಹಾರೈಸುತ್ತೇನೆ.

ಸ್ನಾತಕೋತ್ತರ ಕೇಂದ್ರ
ಬಿ. ಆರ್. ಪ್ರಾಜೆಕ್ಟ್

ಬಸವರಾಜ ನೆಲ್ಲಿಸರ
ಕನ್ನಡ ವಿಭಾಗ

CC-0. In Public Domain. Digitization by eGangotri

ಮುನ್ನುಡಿ

ಕನ್ನಡ ಕಾವ್ಯ ಹಲವಾರು ಅವಸ್ಥಾಂತರಗಳನ್ನು ದಾಟಿ ಬಂದಿದೆ. ಪಾಶ್ಚಾತ್ಯ ರೊಮ್ಯಾಂಟಿಕ್ ಸಂಪ್ರದಾಯದಿಂದ ಪ್ರಭಾವಿತವಾದ ನವೋದಯ ಕಾವ್ಯ ಪಂಥವು ಕುವೆಂಪು, ಬೇಂದ್ರೆ, ಪುತಿನ ಮತ್ತು ಮಾಸ್ತಿ ಮುಂತಾದವರಲ್ಲಿ ತನ್ನ ಅತ್ಯುನ್ನತ ಸ್ಥಿತಿಯನ್ನು ಮುಟ್ಟಿ ಕನ್ನಡ ಕಾವ್ಯದ ಇತಿಹಾಸದಲ್ಲಿ ಚಿರಸ್ಮರಣೀಯ ಸ್ಥಾನವನ್ನು ಗಳಿಸಿಕೊಂಡಿದೆ. ಈ ಪಂಥದ ಗೌರಿಶಂಕರವಾಗಿ ಶ್ರೀ ರಾಮಾಯಣದರ್ಶನಂ ಸೃಷ್ಟಿಯಾಗಿದೆ. ಈ ಪಂಥ ತನ್ನ ಸತ್ವ ಮತ್ತು ಜೀವಂತಿಕೆಗಳನ್ನು ಕಳೆದುಕೊಳ್ಳತೊಡಗಿದೆ ಎನ್ನುವ ಅನಿಸಿಕೆ ಪ್ರಬಲವಾಗುತ್ತಿದ್ದಂತೆ ಮತ್ತೆ ಪಾಶ್ಚಾತ್ಯರ ಪ್ರಭಾವದಿಂದಾಗಿ ನವ್ಯ ಕಾವ್ಯ ಪಂಥ ಹುಟ್ಟಿಕೊಂಡಿತು. ವ್ಯಕ್ತಿಗತ ಬದುಕಿನ ಶೋಧನೆ, ಜೀವನದ ಸಂಕೀರ್ಣತೆಯ ಅಭಿವ್ಯಕ್ತಿ, ಪ್ರತಿಮೆಗಳ ನಿರ್ಮಾಣ, ವೈಚಾರಿಕತೆ, ವಾಸ್ತವ ಜೀವನ ಧೋರಣೆ ಮತ್ತು ಭಾಷೆಯಲ್ಲಿ ಸಾಧಿಸಿದ ಅಸಾಧಾರಣ ಬಿಗಿ, ಮುಂತಾದವುಗಳಿಂದ ಇದು ನಮ್ಮ ಕಾವ್ಯದ ಇತಿಹಾಸದಲ್ಲಿ ಮತ್ತೊಂದು ಮಹತ್ವದ ಆಯಾಮವನ್ನು ನಿರ್ಮಾಣ ಮಾಡಿತು.

ಗೋಪಾಲಕೃಷ್ಣ ಅಡಿಗ, ರಾಮಚಂದ್ರಶರ್ಮ, ಎ. ಕೆ. ರಾಮಾನುಜನ್, ಲಂಕೇಶ್, ಕೆ. ಎಸ್. ನರಸಿಂಹಸ್ವಾಮಿ, ಕೆ.ವಿ. ತಿರುಮಲೇಶ್ ಮುಂತಾದ ಕವಿಗಳಲ್ಲಿ ಇದು ತನ್ನ ಎಲ್ಲ ಶಕ್ತಿಯನ್ನೂ ಸಾಕ್ಷಾತ್ಕಾರಗೊಳಿಸಿಕೊಂಡಿತು. ಆದರೆ ನವೋದಯ ಕಾವ್ಯ ಪಂಥ ನಿರ್ಮಿಸಿದ ವಿಶಾಲ ಹರಹನ್ನು ಇದು ಪಡೆಯಲಿಲ್ಲ. ಅದು ಓದುಗರ ಹೃದಯವನ್ನು ಸ್ಪಂದಿಸಿದಷ್ಟು ಇದು ಸ್ಪಂದಿಸಲಿಲ್ಲ. ಅತಿಯಾದ ಬೌದ್ಧಿಕತೆ, ಲೈಂಗಿಕ ವಿಷಯದ ಚಿತ್ರಣದ ಬಗೆಗಿನ ಅತ್ಯಾಸಕ್ತಿ, ಭಾಷೆಯಲ್ಲಿನ ಅತಿಯಾದ ಪೆಡಸುತನ, ವಸ್ತುವಿನ ಚರ್ವಿತಚರ್ವಣತೆ – ಇವುಗಳಿಂದಾಗಿ ಸಹೃದಯ ಈ ಕಾವ್ಯದ ಅಂತರಂಗವನ್ನು ಮುಟ್ಟುವಲ್ಲಿ ವಿಫಲನಾದ. ಆದ್ದರಿಂದ ಓದುಗರನ್ನು ದೂರವಿರಿಸಿ ತನ್ನದೇ ವ್ಯಕ್ತಿಗತ ದುರ್ಗಮ್ಯ ಕೋಟೆಯನ್ನು ಕಟ್ಟಿಕೊಂಡ ಈ ಕಾವ್ಯ ಪಡೆಯಬೇಕಾಗಿದ್ದಷ್ಟು ಆಯಾಮಗಳನ್ನು, ಬೆಳೆಯಬಹುದಾದಷ್ಟು ಎತ್ತರವನ್ನು, ವ್ಯಕ್ತಪಡಿಸಬಹುದಾದಷ್ಟು ಸಾಮರ್ಥ್ಯವನ್ನು ಸಾಧಿಸಲಾರದೆ ಸೋತಿತು. ಇದರ ವಿರುದ್ಧ, ಸಾಮಾಜಿಕ ವಿಷಮತೆಗಳ

CC-0. In Public Domain. Digitization by eGangotri

ವಿರುದ್ಧ, ನಿಗಿನಿಗಿ ಕೆಂಡವಾಗಿ ಉರಿಯತೊಡಗಿದ ತರುಣ ಚೇತನಗಳು ತಮ್ಮದೇ ಆದ ಮತ್ತು ಜನಮನವನ್ನು ಗಾಢವಾಗಿ ತಾಕುವಂತಹ ಕಾವ್ಯ ಮಾರ್ಗವೊಂದನ್ನು ಕಂಡುಕೊಂಡವು. ಮಾರ್ಕ್ಸ್‌ವಾದಿ ವಿಚಾರಧಾರೆ ಇದಕ್ಕೆ ಚಾಲನೆ ನೀಡಿತು. ಇದರಿಂದಾಗಿ ದಲಿತ ಮತ್ತು ಬಂಡಾಯ ಕಾವ್ಯ ಹುಟ್ಟಿಕೊಂಡಿತು. ಎಲ್ಲ ಬಗೆಯ ಶೋಷಣೆ ಮತ್ತು ಅಸಮಾನತೆಯ ವಿರುದ್ಧ ಇದು ಖಡ್ಗವೆತ್ತಿತು. ಸರಳ ಭಾಷೆ, ಒಡಲಾಳದ ಕಿಚ್ಚು, ಮುಕ್ತವಾದರೂ ಸರಳವಾದ ಛಂದಸ್ಸು – ಇವುಗಳ ಸಮನ್ವಯವಾದ ಈ ಕಾವ್ಯ ಈಗ ಹೆಚ್ಚುಹೆಚ್ಚಾಗಿ ಜನಪ್ರಿಯತೆಯನ್ನು ಗಳಿಸಿಕೊಳ್ಳುತ್ತಿದೆ. ನವ್ಯ ಪಂಥದಲ್ಲಿ ಬರೆದು ಪ್ರಸಿದ್ಧರಾದ ಹಲವರು ಈ ಮಾರ್ಗದಲ್ಲಿಯೂ ಬರೆಯುತ್ತಾ ತಮ್ಮ ಹಿಂದಿನ ಕಾವ್ಯದ ಕೊರತೆಯನ್ನು ತುಂಬುತ್ತಿದ್ದಾರೆ. ಅಂತೂ ಈಗ ಕಾವ್ಯ ಸರಳತೆಯ ಕಡೆಗೆ, ವೈಚಾರಿಕತೆಯ ಕಡೆಗೆ, ಸಾಮಾಜಿಕ ವಿಷಮತೆಗಳ ನಿರ್ನಾಮದ ಕಡೆಗೆ ಹೆಚ್ಚು ಬಾಗುತ್ತಿರುವುದು ಸಂತಸದ ವಿಷಯ. ಆದರೆ ಸರಳತೆಯ ಹೆಸರಿನಲ್ಲಿ ಅತ್ಯಂತ ಬಾಲಿಶವಾದ, ಕೇವಲ ಪ್ರಾಸಬದ್ಧವಾದ ಪದ್ಯರಚನೆಗಳೂ ಇತ್ತೀಚೆಗೆ ಹೇರಳವಾಗುತ್ತಿವೆ ಕಾವ್ಯಸೃಜನೆ ಒಂದು ಗಂಭೀರ ಕಾಯಕ ಎಂಬುದನ್ನು ಮನಗಾಣದಿದ್ದರೆ ಈ ಸರಳತೆ ಕನ್ನಡ ಕಾವ್ಯವನ್ನು ಒಣಕಡ್ಡಿಗಳ ವನವನ್ನಾಗಿ ಮಾರ್ಪಡಿಸುವ ಭಯವೂ ಇದೆ. ಇಂಥ ಸಂದಿಗ್ಧ ಪರಿಸ್ಥಿತಿಯಲ್ಲಿ ಶ್ರೀ ದ. ರಾಜಣ್ಣ ಇವರ 'ಗಿರಿ ಸ್ಪಂದನ' ಕವಿತಾ ಸಂಕಲನ ಬೆಳಕು ಕಾಣುತ್ತಿದೆ.

ಇದು ಶ್ರೀ ದ. ರಾಜಣ್ಣನವರ ಮೊದಲನೆಯ ಕೃತಿ. ಇವರ ವಯಸ್ಸಿಗೆ ಮತ್ತು ಮನಸ್ಸಿಗೆ ಅನುಗುಣವಾದ ರಚನೆಗಳು ಇಲ್ಲಿವೆ. ನವೋದಯ ಕಾವ್ಯಪಂಥದಲ್ಲಿ ಅಧಿಕವಾಗಿದ್ದ ಭಾವನಾವಶತೆ, ಪ್ರಾಸಮೋಹ, ಭಾಷೆಯ ದುಂದು ಮತ್ತು ಸಾಮಾನ್ಯ ಸಂಗತಿಗಳನ್ನು ಕವಿತೆಯಾಗಿ ಹೊಸೆಯುವ ಹಂಬಲ, ಇಲ್ಲಿ ಮೊದಲನೋಟಕ್ಕೆ ಕಂಡುಬರುತ್ತವೆ. ಆದರೂ ಲಯದ ಮೇಲಿನ ಹಿಡಿತ, ಸರಳ ಭಾಷೆಯ ಬಳಕೆ, ಮುಗ್ಧ ಮನಸ್ಸಿನ ಆದರ್ಶದ ತುಡಿತ ಮತ್ತು ಅಲ್ಲಲ್ಲಿ ಮಿಂಚುವ ಆರೋಗ್ಯಕರ ಸಾಮಾಜಿಕ ಚಿಂತನೆಗಳು ನಮ್ಮ ಮನಸ್ಸನ್ನು ಮುಟ್ಟಿ ಇವರು ಬೆಳೆಯುವ ಸೂಚನೆಯನ್ನು ಭರವಸೆಯನ್ನು ಕೊಡುವಂಥ ಕವಿ ಎನ್ನುವಂತೆ ಮಾಡುತ್ತವೆ.

CC-0. In Public Domain. Digitization by eGangotri

"ಬಾಂದಳವು ಬಾಗಿ ಗಿರಿಯ ಮುತ್ತಿಟ್ಟಿರಲು
ಗಿಡಬಳ್ಳಿ ಮೊಗವೆತ್ತಿ ಅಂಬರವ ಚುಂಬಿಸಿರೆ
ಮುಗಿಲು ನಾಚುತ ಮುತ್ತ ಸುರಿಸಿದೆ ಭುವಿಗೆ
ನದಿ ತುಂಬಿ ನದ ತುಂಬಿ ಮನ ತುಂಬಿ ಬರಲು"

"ಬಿರಿದ ಮಡಕೆಯಲ್ಲಿ
ಬೇಯುತಿರುವ ಬೇಳೆಯಂತೆ"

ನಿನ್ನ ಮೃದುಹಾಸ ಮುಗ್ಧ ಕೋಮಲತೆ ಸೋಂಕಿದರೆ
ಕಗ್ಗಲ್ಲಿನೆದೆಯಲ್ಲೂ ಹೂವರಳದೇನು?

"ಮೋಡಗಳ ಚುಂಬನದಿ
ನೀ ಬಿದ್ದೆ ಹನಿಯಾಗಿ ಕೆಳಗೆ
ನದಿಯಾಗಿ ಹರಿದೆ"

"ತಿಳಿನೀಲ ಬಾಂದಳದಿ
ನೂರು ಬೆಳ್ಳಕ್ಕಿಗಳು
ಗೆರೆ ಕಟ್ಟಿ ಹಾಯುತಿರೆ"

— ಮುಂತಾದ ಪಂಕ್ತಿಗಳು ಶ್ರೀ ರಾಜಣ್ಣನವರ ಭಾವುಕ ಹೃದಯವನ್ನು ಮತ್ತು ಕಲ್ಪನೆಗಳ ಹೊಸತನವನ್ನು ನಮಗೆ ಪರಿಚಯಿಸುತ್ತವೆ.

ಅರೆಬೆಂದ ಭಾವನೆಗಳನ್ನು ಶಿಥಿಲವಾದ ಭಾಷೆಯಲ್ಲಿ ಕೆಲವೊಮ್ಮೆ ಅಭಿವ್ಯಕ್ತಿಸುವ ಇವರ ಕಾವ್ಯದ ವೈಯ್ಯಲ್ಲಿ ಇದ್ದಕ್ಕಿದ್ದಂತೆ ವಿಚಾರ ಶೀಲತೆಯ ಬೆಳಕು ಗೆರೆಗಳು ಕಾಣಿಸಿಕೊಳ್ಳುವುದು ಈ ಕವಿಯು ಸಮಾಜ ಜೀವನದ ವಾಸ್ತವತೆಗೂ ಪ್ರಾಮಾಣಿಕವಾಗಿ ಮನಸ್ಸನ್ನು ತೆರೆದಿದ್ದಾರೆಂಬುದನ್ನು ರುಜುವಾತುಪಡಿಸುತ್ತವೆ.

ಜೀತ, ಬದುಕು, ಅನ್ನದಾತ, ಇದು ಬದುಕೇ, ಕ್ರಾಂತಿ, ವಾಸ್ತವ ನಮ್ಮವರು - ಈ ಕವಿತೆಗಳು ಇಂತಹ ಆರೋಗ್ಯಕರ ಸಾಮಾಜಿಕ ಸ್ಪಂದನಗಳನ್ನು ಒಳಗೊಂಡಿರುವುದು ಮೆಚ್ಚಬೇಕಾದ ವಿಷಯ.

CC-0. In Public Domain. Digitization by eGangotri

'ಕರಿ ನೆರಳಿನಂತೆ ಬಾಡಿದೆ ಜೀವವು ಉಸಿರಾಡುತಲಿರುವ ಹುಳದಂತೆ' 'ಬಯಲ ಬಿಸಿಲಲಿ ಸುಡುವ ದೇಹಗಳು ಉರುಳು ಚಕ್ರಕೆ ಸಿಕ್ಕಿ ಹನಿರಕ್ತವಿಲ್ಲ, ಬರಿ ಬೆವರೆ' ಮುಂತಾದ ಸಾಲುಗಳು, ಹಾಗೂ

ಉದರನಿಮಿತ್ತಂ
ಬಗೆಬಗೆಯ ವೇಷ ಧರಿಸಿ
ಬಳಿವ ಬಣ್ಣಕೆ ಸಮನಾಗಿ
ಹೆಜ್ಜೆ ಹಾಕಿ ಹಾಡಿ ಕುಣಿದಾಗ
ಗೆಜ್ಜೆ ಚುಚ್ಚಿ ಕಾಲು ನೋವಾದರೂ
ನಗಲೇಬೇಕಾಗಿ ಬಂದಾಗಲೆಲ್ಲಾ
ನನಗೊಂದು ಸಣ್ಣ ಅನುಮಾನ
ನಾನು ಬದುಕಿದ್ದೇನೆಯೇ ? ಎಂದು !

ಈ ಸಾಲುಗಳಲ್ಲಿ ವ್ಯಕ್ತವಾಗುವ ಆತ್ಮವಿಮರ್ಶೆ — ಇವು ಕವಿ ಬೆಳೆಯುವ ಹಾದಿಯಲ್ಲಿದ್ದಾರೆಂಬುದನ್ನು ನಿಚ್ಚಳವಾಗಿ ತೋರಿಸುತ್ತವೆ.

ಕಂಡಕಂಡ ಸಾಮಾನ್ಯ ಸಂಗತಿಗಳಿಗೆಲ್ಲಾ ಭಾವುಕವಾದ ಉತ್ಸಾಹದ ಉದ್ಗಾರ ತೆಗೆಯುವ ಪ್ರವೃತ್ತಿಯನ್ನು, ಭಾಷೆಯ ದುಂದನ್ನು ಮತ್ತು ಅನುಕರಣ ಚಪಲವನ್ನು ತಡೆದು, ತಮ್ಮ ಆಲೋಚನೆಗಳನ್ನು ಕಲ್ಪನೆಗಳನ್ನು ಪಾಕವಾಗಿಸಿ ಅಭಿವ್ಯಕ್ತಿಸುವ ಕಲೆಯನ್ನು ಇವರು ಬೆಳೆಸಿಕೊಂಡಲ್ಲಿ ಇದಕ್ಕಿಂತ ಉತ್ತಮ ಕವಿತೆಗಳನ್ನು ಇವರಿಂದ ನಿರೀಕ್ಷಿಸುವುದು ಸಾಧ್ಯವಿದೆ. ಈ ದಾರಿಯಲ್ಲಿ ಶ್ರೀ ರಾಜಣ್ಣನವರು ನಡೆದು ತಮ್ಮ ಕಾವ್ಯ ಜೀವನವನ್ನು ಸತ್ವಯುತಗೊಳಿಸಿಕೊಳ್ಳಲಿ ಎಂದು ಹಾರೈಸುತ್ತೇನೆ.

ಸ್ನಾತಕೋತ್ತರ ಕೇಂದ್ರ
ಬಿ. ಆರ್. ಪ್ರಾಜೆಕ್ಟ್
೨ — ೩ — ೧೯೮೬

ಎಚ್. ಜೆ. ಲಕ್ಕಪ್ಪಗೌಡ
ಮುಖ್ಯಸ್ಥರು, ಕನ್ನಡ ವಿಭಾಗ

CC-0. In Public Domain. Digitization by eGangotri

ನಿವೇದನೆ

ಸಹೃದಯ ಓದುಗರೇ, ನನ್ನ ಮೊದಲ ಕವನ ಸಂಕಲನ "ಗಿರಿ ಸ್ಪಂದನ" ಇದೀಗ ನಿಮ್ಮ ಕೈಸೇರಿದೆ.

ಕಾವ್ಯ ಮನುಷ್ಯನ ಬದುಕಿನ ಅನುಭವ - ಅನುಭಾವಗಳ ಅಭಿವ್ಯಕ್ತಿ ಮಾಧ್ಯಮವಾಗಿ ಹೊರಹೊಮ್ಮುತ್ತದೆ. ಬಯಲ ಭೂಮಿಯ ಬಿಸಿ ಉಸಿರ ತಾಪ, ಮಲೆನಾಡಿನ ತಂಪಿನ ಕಂಪು ಒಳಗೊಂಡ ಇಲ್ಲಿನ ಕವನಗಳು ಪ್ರಕೃತಿಯ ಚೆಲುವು ಹಾಗೂ ಸೌಂದರ್ಯೋಪಾಸನೆ ಮಾಡಿರುವುದೇ ಆಗಿರದೆ, ಸಮಾಜದ ಬದುಕಿನ ನೋವು ನಲಿವುಗಳ, ಕಲ್ಪನೆಯ ತುಡಿತ ಸೆಳೆತಗಳ ಕ್ರಿಯಾತ್ಮಕ ಬಾಳಿನಲ್ಲಿನ ಕಲಾತ್ಮಕ ಬದುಕಿನ ಹಂತಗಳ ರೂಪದಲ್ಲಿ ರಚಿತಗೊಂಡಿವೆ.

ಪದ್ಯಗಳ ರಚನೆಯು ಹಳೆಯ ದಿಸೆಯಲ್ಲಿ ಸಾಗಿರದೆ, ನವ್ಯ ಶೈಲಿಯಲ್ಲಿ ರಚಿತಗೊಂಡಿರುವ ಕವನಗಳಲ್ಲಿ ಭಾವ ಪ್ರಚೋದನೆಗಳಿರಬಹುದು; ಇಲ್ಲದಿರಬಹುದು. ಆದರೆ ಒಂದೊಂದು ಕವನಗಳೂ ಗಿರಿನಾಡಿನ ಸಸ್ಯಶ್ಯಾಮಲೆಯ ಮಡಿಲಲ್ಲಿ ಮುದಗೊಂಡು ಹೃದಯಾಂತರಾಳದಿಂದ ಸ್ಪಂದನ ಗೊಂಡಿದೆ ಎಂಬುದನ್ನು ಸಹೃದಯ ಓದುಗರು ಮನಗಂಡರೆ ನನ್ನ ಹಲವು ವರ್ಷಗಳ ಪ್ರಯತ್ನ ಸಾರ್ಥಕವಾದೀತು.

ಕನ್ನಡ ಸಾರಸ್ವತ ಲೋಕಕ್ಕೆ ನಾನು ಅರ್ಪಿಸುತ್ತಿರುವ ಮೊದಲ ಕುಸುಮ, ಈ ಕವನ ಸಂಕಲನ.

ನನ್ನ ಹೃದಯಾಂತರಾಳದಲ್ಲಿ ಸುಪ್ತಗೊಂಡ ಭಾವಗಳಿಗೆ ಮೂರ್ತಸ್ವರೂಪ ನೀಡಿ ಪ್ರೋತ್ಸಾಹಿಸಿದ ನನ್ನ ನೆಚ್ಚಿನ ಶ್ರೀ ಕೆ. ಎಸ್. ಬಾಲಕೃಷ್ಣ, ಮುಖ್ಯೋಪಾಧ್ಯಾಯರು ಮತ್ತು ನೌಕರವೃಂದ, ಸಾಹಿತ್ಯ ಸೇವಾಸಕ್ತರಾದ ಶೃಂಗೇರಿ

CC-0. In Public Domain. Digitization by eGangotri

ನಿವೇದನೆ

ಸಾಹಿತ್ಯ ಸಂಘದ ಅಧ್ಯಕ್ಷರು ಮತ್ತು ಸದಸ್ಯರುಗಳು, ಸ್ವಂತ ಕವನ ಪ್ರಕಟಣೆಗೆ ಪ್ರೋತ್ಸಾಹ ನೀಡಿದ ಶ್ರೀ ಕೆ. ಎಮ್. ರೇವಣ್ಣ, ಸುಂದರವಾಗಿ ಮುಖಪುಟವನ್ನು ಚಿತ್ರಿಸಿಕೊಟ್ಟ ಶ್ರೀ ಶಿವಶಂಕರ್, ವಿಜಯ್, ಅಂದವಾಗಿ ಮುದ್ರಿಸಿಕೊಟ್ಟ ಪಾರ್ವತೀ ಮುದ್ರಣದವರಿಗೂ, ನನ್ನ ಉತ್ಸಾಹಕ್ಕೆ ಬೆಂಬಲ ನೀಡಿ ಪರಿಚಯ ಲೇಖನ ಬರೆದುಕೊಟ್ಟ ಶ್ರೀ ಕೆ. ಪುಟ್ಟಯ್ಯ ಅನಿಸಿಕೆ ಬರೆದ ಶ್ರೀ ಬಸವರಾಜ ನೆಲ್ಲಿಸರ, ಅಚ್ಚಿನ ಮನೆ ಸೇರುವ ಮುನ್ನ ಕವನಗಳನ್ನು ತಿದ್ದಿ ಮುನ್ನುಡಿಯನ್ನು ಬರೆದುಕೊಟ್ಟು ಪ್ರೋತ್ಸಾಹಿಸಿದ ಶ್ರೀ ಎಚ್. ಜೆ. ಲಕ್ಕಪ್ಪ ಗೌಡರಿಗೂ ಹಾಗೂ ನನ್ನ ಈ ಚೊಚ್ಚಲ ಕೃತಿ ಬೆಳಕು ಕಾಣಲು ಸಹಕರಿಸಿದ ಬಂಧುಗಳು, ಗೆಳೆಯರು ಎಲ್ಲರಿಗೂ ನನ್ನ ಅನಂತ ಕೃತಜ್ಞತೆಗಳು.

ತಮ್ಮ ತಪಃಪ್ರಭಾವದಿಂದ ನನ್ನಲ್ಲಿ ಜ್ಞಾನಜ್ಯೋತಿಯನ್ನು ಬೆಳಗಿಸಿದ ಶ್ರೀ ಶೃಂಗೇರಿ ಪೀಠಾಧೀಶ್ವರರಾದ ಶ್ರೀ ಶ್ರೀ ಜಗದ್ಗುರು ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳವರಲ್ಲಿ ಹಾಗೂ ಅವರ ಕರಕಮಲಸಂಜಾತ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರಿಗೂ ನನ್ನ ಗೌರವ ಪೂರ್ವಕ ಶಿರಸಾಷ್ಟಾಂಗ ಪ್ರಣಾಮಗಳು.

ಸಹೃದಯಿ,

ಶೃಂಗೇರಿ

ದ. ರಾಜಣ್ಣ

ಶ್ರೀ ಜ. ಅ. ವಿ. ಬಾ. ಪ್ರೌಢಶಾಲೆ

೧೫-೨-೮೬

CC-0. In Public Domain. Digitization by eGangotri

ಪರಿವಿಡಿ

೧	ಮಲೆನಾಡು	.... ೧
೨	ಸುಸ್ವಾಗತ	.... ೨
೩	ಮಲ್ಲಿಗೆ	.... ೩
೪	ಭೂದೇವಿಯ ಕೊಡುಗೆ	.... ೪
೫	ಕನ್ನಡದೇವಿ	.... ೫
೬	ಹಂಪೆ	.... ೭
೭	ಜೀತ	.... ೯
೮	ಚೇತನ	.... ೧೦
೯	ಬದುಕು	.... ೧೧
೧೦	ಅನ್ನದಾತ	.... ೧೨
೧೧	ಒಂದು ಸಂಜೆ	.... ೧೩
೧೨	ಇದು ಬದುಕೇ ?	.... ೧೪
೧೩	ಕರಿಮೋಡ	.... ೧೫
೧೪	ಮೌನಗೀತೆ (ಪಿಕಗಾನ)	.... ೧೬
೧೫	ನಿರೀಕ್ಷೆ	.... ೧೭
೧೬	ನೆನಹು	.... ೧೮
೧೭	ಬಾಳೊಂದು ಬಂಗಾರ	.... ೧೯
೧೮	ಧನ್ಯ	.... ೨೦
೧೯	ರೈತನ ಹಾಡು	.... ೨೧
೨೦	ಮುಂಗಾರ ಕರಿಮೋಡ	.... ೨೨
೨೧	ಹೌದಪ್ಪಗಳು	.... ೨೩
೨೨	ಕ್ರಾಂತಿ	.... ೨೪
೨೩	ಭಾಷಾಸಮರ	.... ೨೫
೨೪	ನಮ್ಮೂರು	.... ೨೬

CC-0. In Public Domain. Digitization by eGangotri

ಪರಿವಿಡಿ

೨೫	ನಮ್ಮ ಮನೆ	೨೭
೨೬	ಮಿನುಗುತಾರೆ	೨೮
೨೭	ದೀಪಾವಳಿ	೨೯
೨೮	ನಮ್ಮವರು	೩೦
೨೯	ಗಾಂಧಿ	೩೨
೩೦	ಜಂಜಾಟ	೩೩
೩೧	ಹಂಬಲ	೩೪
೩೨	ಅನುರಾಗ	೩೫
೩೩	ಗೆಳತಿಗೆ	೩೬
೩೪	ವಾಸ್ತವ	೩೭
೩೫	ಪ್ರತಿಭೆ	೩೮
೩೬	ತುಡಿತ	೪೦
೩೭	ಕಲ್ಪಿತೆ	೪೧
೩೮	ನೆನಪು	೪೨
೩೯	ನಿಧಿ	೪೩
೪೦	ನಿರ್ಲಿಪ್ತರು	೪೪
೪೧	ಆಸೆ	೪೫
೪೨	ಪ್ರಜ್ಞೆ	೪೬
೪೩	ಕೊಡುಗೆ	೪೭

CC-0. In Public Domain. Digitization by eGangotri

ಮಲೆನಾಡು

ವೈಮರೆತ ಭಾವದಲಿ, ಕಂಡ ಕನಸಿನ ನಾಡು ಸುಂದರ
ಹಸಿರ ವನಸಿರಿಯು, ಬೆಳಗಿಸಿದ ಚಂದಿರ

ಸೊಬಗಿನಾ ಈ ಭುವಿಯು, ಸುರಲೋಕದಂತೆ
ಹಸಿರ ಗಿರಿಗಳ ಸಾಲು, ನವತೋರಣದಂತೆ

ಹರಡಿ ಬೆಳೆದ ಪಚ್ಚೆ ಪೈರು, ಹಸಿರುಡಿಗೆಯಂತೆ
ಮಲೆನಾಡಿನಾ ಚೆಲುವು ನಿತ್ಯೋತ್ಸವದಂತೆ

ಬಾಂದಳವು ಬಾಗಿ ಗಿರಿಯು ಮುತ್ತಿಟ್ಟಿರಲು
ಗಿಡಬಳ್ಳಿ ಮೊಗವೆತ್ತಿ ಅಂಬರವ ಚುಂಬಿಸಿರೆ

ಮುಗಿಲು ನಾಚುತ ಮುತ್ತ ಸುರಿಸಿದೆ ಭುವಿಗೆ
ನದಿ ತುಂಬಿ ನವ ತುಂಬ ಮನ ತುಂಬಿ ಬರಲು

ನವಚೆಲುವ ಪಡೆದಳಾ ಅವನಿ, ನಸು ನಾಚಿ ನಿಂದು
ಕಣ್ ತುಂಬಿ ಮನ ತುಂಬಿ ತನು ತುಂಬಿ ನಿಂತ
ಮಲೆನಾಡ ನೀನೋಡು, ಮೈಮರೆತು ಹಾಡು

CC-0. In Public Domain. Digitization by eGangotri

ಸುಸ್ವಾಗತ

ನಿಮಗಿದೋ ಸುಸ್ವಾಗತ
ನನ್ನೀ ನಲ್ಮೆಯ ಗಿರಿನಾಡಿಗೆ

ಹತ್ತಿರವಿರುವುದು ನಮ್ಮೂರು,
ಎಲ್ಲರ ಪ್ರೀತಿಗೂ ತವರೂರು

ಶಾಂತದಿ ಹರಿದಿಹ ತುಂಗೆಯ ತಟದಲಿ
ಶಂಕರಗೊಲಿದ ಶಾರದೆ ನೆಲಸಿಹಳಿಲ್ಲಿ

ಋಷ್ಯಶೃಂಗರ ತಪದ ಬೀಡು,
ಅದ್ವೈತ ಪೀಠದ ನೆಲೆನಾಡು

ಸುತ್ತಮುತ್ತ ಹಸಿರಿನ ಕಾಡು,
ರವಿಯನು ಮುಟ್ಟಿದ ತರುಗಳ ಬೀಡು

ಹರುಷದಿ ಮಳೆ ಧರೆಗಿಳಿದಿರಲು
ಚಿಲ್ಲಿದೆ ಹಸಿರನು ಗಿಡ ಮರ ಬಳ್ಳಿ,

ನೆನೆವುದು ಮನ ಈ ಹಸಿರಿನ ನಾಡು
ಬರೆವುದು ಹೃದಯದಿ ಕಲ್ಪಿತ ಹಾಡು

ಚೆಲುವನು ಅರಸುವ ಜಾಣರೆ ಬನ್ನಿ,
ನನ್ನೀ ಸೊಬಗಿನ ಮಲೆನಾಡಿಗೆ

CC-0. In Public Domain. Digitization by eGangotri

ಮಲ್ಲಿಗೆ

ಮಲ್ಲಿಗೆ ಮಲ್ಲಿಗೆ ಅರಳಿದೆ ಬೆಳ್ಳಗೆ
ಹಸಿರಿನ ಬಳ್ಳಿಲಿ ಮೂಡಿದೆ ಮೆಲ್ಲಗೆ
ಕಂಪನು ಬೀರುತ ಎಲ್ಲೆಡೆಗೆ

ಭೂಮಿಯ ಸಾರವ ಹೀರಿದೆ
ಬಿಳುಪಿನ ಬಣ್ಣವ ಹೊಂದಿದೆ
ಸೊಂಪಿನ ಕಂಪನು ಚೆಲ್ಲಿದೆ

ಚೆಲುವೆಯ ಮುಡಿಯನು ಏರಿದ
ಸೊಬಗಿನ ಸಿರಿಯನು ಮೂಡಿಸಿದೆ
ಚೆಲುವಿಗೆ ಚೆಲುವನು ಕೂಡಿಸಿದೆ

ಜನರಿಗೆ ಬಯಕೆಯ ಹೂಡಿದೆ
ಆಸೆಯ ಕಂಗಳ ತೋರಿದೆ
ಸ್ನೇಹವ ಹತ್ತಿರ ಮಾಡಿದೆ

ಮೊಗ್ಗಲಿ ಕನಸನು ಕಾಣುವೆ
ಹಸುಳೆಯ ತೆರದಲಿ ತೋರುವೆ
ಮೆಲ್ಲಗೆ ಶಿವಮುಡಿ ಸೇರುವೆ
ಸಾರ್ಥಕ ಬಾಳನು ಪಡೆವೆ

CC-0. In Public Domain. Digitization by eGangotri

ಭೂದೇವಿ ಕೊಡುಗೆ

ಬೇಸಿಗೆಯು ಕಳೆದಾಯ್ತು ಮುಂಗಾರು ಹುಟ್ಟ್ಯಾಯ್ತು
ಒಣಗಿದ ಮರವೆಲ್ಲಾ ವಸಂತನಾಗಮನದಿಂದೆ
ಹಸಿರಾಯಿತು ನೆಲ, ಬಸಿರಾಯಿತು
ಗಿಡಮರಗಳೆನ್ನದೆ ಎಲ್ಲೆಡೆಯೂ ಬಂಗಾರಬಣ್ಣ
ಒಕ್ಕಲಮಗನಿಗೆ ಬೇಟಮೂಡಿತೋ ಅಣ್ಣ
ಹೊತ್ತು ಏರುವ ಮುನ್ನ ನೇಗಿಲನು ಹೊತ್ತು
ಹರುಷದಿಂದ ಭೂತಾಯಿ ಉತ್ತು
ಬಿತ್ತಿದನೋ ಬೀಜ ಹೊಲಕೆಲ್ಲಾ
ಎಲ್ಲೆಲ್ಲೂ ಹಸಿರು ಮನವೆಲ್ಲಾ ಹಸಿರು
ಭೂದೇವಿ ಕೊಟ್ಟಳು ಹೊನ್ನಸಿರಿಮುತ್ತ
ಮನ ತುಂಬಿ ಧನ ತುಂಬಿ ಉಕ್ಕಿತು ಹರ್ಷ
ಬದುಕು ಬಂಗಾರವಾಯಿತು ನೆಲದಿಂದ
ಕಂಡನಾ ರೈತ, ಬಹುದಿನದ ನನಸು.

CC-0. In Public Domain. Digitization by eGangotri

ಕನ್ನಡದೇವಿ

ಜಯುಜಯು ಭಾರತಿ, ಜನಮನದಾರತಿ,
ಕರುನಾಡದೇವಿಗೆ, ಒಲವಿನ ಆರತಿ .... ನಿನಗವ್ಮಾ

ನಿನ್ನಯು ಮುಡಿಲೊಳು ಹಸಿರಿನ ಮಲೆನಾಡು
ಪೈರಿನ ಹೊಲಗಳು ನಿನ್ನಯು ಒಡಲು ||

ತುಂಗೆ ಕಾವೇರಿಯು ಕಲರವದಿಂದ,
ಮಣ್ಣಿನ ಮಕ್ಕಳಿಗಾ ಆನಂದ ||

ಬೆಳಕಿನ ತಾಯಿ ಶರಾವತಿ
ಜೀವದ ಕುಡಿಗಳು ವರದ ಹೇಮಾವತಿ ||

ಮನವನು ತೊಳೆವಳು, ಪವಿತ್ರ ನೇತ್ರಾವತಿ
ನೆಲೆಸಿಹುದು ಧರ್ಮ ನೆಲೆಯಾಗಿ ||

ಹೊಯ್ಸಳ ಅರಸನ ಕಲೆ ಬೇಲೂರು
ಕೆಚ್ಚೆದೆಯಾ ಕಲಿ, ಹಂಪೆಯ ವೀರ ||

ಚೆಲುವನು ತುಂಬಿದ ಮೈಸೂರರಸರು
ದೇಶದಿ ಹೆಸರು ಚಾಲುಕ್ಯ ವೀರರು ||

ನಾಡಿನ ಎಲ್ಲೆಯ ಮೀರಿದ ಜ್ಞಾನಿ
ವಿಶ್ವೇಶ್ವರಯ್ಯ ಮಹಾ ತಂತ್ರಜ್ಞಾನಿ ||

CC-0. In Public Domain. Digitization by eGangotri

ಸಂಗೀತದಾ ಗಣಿ ವೀಣೆ ಶೇಷಣ್ಣಾ
ಕನ್ನಡದಾ ಕವಿ, ಕಲಿ ಪಂಪ ||

ಧಾರವಾಡದಾ ಪೇಡ, ಮೈಸೂರಿನಾಪಾಕ
ಕೊಡಗಿನ ಕಿತ್ತಳೆ ನಾಡಿನಲ್ಲೇ ಹೆಸರು ||

ಹೊಸಹೊಸ ಬಗೆಯ ನವಶೋಧಕರು
ವಿಶ್ವದ ಎಲ್ಲೆಡೆ ಹೆಸರಾಗಿಹರು ||

ದೇಶದ ಎಲ್ಲಾ ಮೂಲೆಗಳಲ್ಲೂ
ಹೆಸರನು ಪಡೆದಿಹ ಕನ್ನಡನಾಡು ||

ಭುವನದ ಮುಕುಟದಿ ನವಮಣಿಯಂತೆ
ಕಂಗೊಳಿಸಿಹಳು ಕನ್ನಡಮಾತೆ ||

ಕರಿಮಣ್ಣು ಜಲಜಿರಿತ ಕನ್ನಡದಾ ಕಂಪು
ಉಪ್ಪುಕಡಲಿನ ನೆರೆತಂಪು, ಕಂಡುಂಡು ||

ಕಲಿಯಾಗಿ, ಕವಿಯಾಗಿ, ನವಜಾತಳಾಗಿ
ಮೆರೆದಿಹಳು ಕನ್ನಡತಿ ಹಿರಿದಾಗಿ ||

CC-0. In Public Domain. Digitization by eGangotri

ಹಂಪೆ

ದುರ್ಧರ ಬದುಕಿಗೆ ಹಿಡಿದಿದೆ ಕನ್ನಡಿ
ನೊಂದಿಹ ನೆಲದಲಿ ಅನಂತ ಬದುಕು
ನೆನ್ನೆಯ ನಾಳಿನ ಜೀವನವಲ್ಲ
ಬಹುಕಾಲದ ಕಥೆಯನು ಹೇಳುವುದು

ಹೇಳುತಿದೆ ಕಲ್ಲು ತನ್ನಯ ಕಥೆಯ
ಅನಂತಕಾಲದ ವ್ಯಸನದ ನೆಲೆಯ
ಬಾಳಿದೆ ಹಿಂದೆ ಹಿರಿದಾಗಿ
ಬಳಲಿದೆನಿಂದು ನಿಮಗಾಗಿ

ಕರಗುತಿದೆ ಬಾಳು ನಿಮ್ಮಯ ನೋಡಿ
ಕೊರಗುತಿದೆ ಉಸಿರು ಹಿಡಿಹಿಡಿಯಾಗಿ
ನನ್ನೀ ಅವನತಿ ಯಾರಿಂದಾಗಿ
ನಮ್ಮಲಿ ಒಮ್ಮತ ಇಲ್ಲದಕ್ಕಾಗಿ

ಬಂದಿತು ದುಸ್ಥಿತಿ ಇದರಿಂದಾಗಿ
ಒಡೆಯಿತು ಹೃದಯ ಪುಡಿಪುಡಿಯಾಗಿ
ಆಯಿತು ವೇದನೆ ಅಪಾರವಾಗಿ
ನಶಿಸಿತು ಕಲೆ ಶ್ರೀಮಂತಿಕೆ ಮಣ್ಪಾಲಾಗಿ

CC-0. In Public Domain. Digitization by eGangotri

ಬಂದರು ಯವನರು ನಾಡಿನ ಒಳಗೆ
ಹೊಕ್ಕರು ಗುಡಿಗೋಪುರಗಳಿಗೆ
ದೋಚಿದರೆಲ್ಲಾ ಸಿರಿಸಂಪತ್ತು
ಬರಿದಾಯಿತು ಎಲ್ಲಾ, ಇನ್ನೇನಿಲ್ಲಾ.

ನಮ್ಮವರೆಲ್ಲಾ ಬಾಳಿದರೊಮ್ಮೆ ಹೆಸರಾಗಿ
ವೀರಸಿಂಹಗಳಂತೆ ಹಿರಿದಾಗಿ,
ಈಗೇನಾಯಿತು ಕೇಳಿರಿ ಒಮ್ಮೆ,
ಬರಿದಾಯಿತು ಬದುಕು, ಹೆಸರಿಲ್ಲದಾಗೆ.

ಕಟ್ಟಿದ ಕೋಟೆಕೊತ್ತಲಗಳೆಲ್ಲಾ
ಬಿದ್ದವು ಹಾಳು ಕೊಂಪೆಯಲಿ.
ನಿರ್ಜೀವಗೊಂಡ ಗುಡಿಗೋಪುರಗಳು
ನಿಂತವು ಇಂದು. ನೆಲೆ ಇಲ್ಲದಂತೆ

ಕೇಳುವರಾರು ನನ್ನೀ ವ್ಯಥೆಯ
ಸಂಕಟಪಟ್ಟರೆ ಅಳುವವರುಂಟೆ ?
ಎಲ್ಲವೂ ವ್ಯರ್ಥ, ಬರಿ ರೋದನವು,
ಸುರಿಸುವರೊಮ್ಮೆ ಕಣ್ಣೀರನು

CC-0. In Public Domain. Digitization by eGangotri

ಜೀತ

ಬರ್ಬರ ಬದುಕಿಗೆ ಹಿಡಿದಿದೆ ಕನ್ನಡಿ
ಜನಮನದಲಿ ಹೋರಾಟ
ಮೇಲುಕೀಳುಗಳ ಮೇಲಾಟ
ಸಾವಿನ ಅಂಚಲಿ ಸೆಣಸಾಟ

ಕಾರ್ಮಿಕನಲ್ಲಿ ಬಿಸಿಲಲಿ ನಿಂತು
ಸೂರ್ಯಗೆ ಬೆನ್ನನು ಕೊಟ್ಟು ಸುಡುತಿಹನು
ಕರಿನೆರಳಂತೆ ಬಾಡಿದೆ ಜೀವವು
ಉಸಿರಾಡುತಲಿರುವ ಹುಳದಂತೆ

ಗುಡಿಸಲ ಮೂಲೆಯು ಕೆಂಪುದೀಪ
ದೂಡಿದೆ ಕರಿಹೊಗೆ, ಭಾವವನು,
ದಿಟ್ಟಿತ ನಿಂತಿಹ ಬಡಕಲ ದೇಹದಿ ಹೊರಟಿದೆ
ಬಸಿರತಾಪದ, ಅನ್ನದ ಕೂಗು,

ಒಡೆದಿಹ ಕನ್ನಡಿ ತೆರದಲಿ ಜೀವವು
ಪಿಳಿಪಿಳಿ ಕಣ್ಣನು ಬಿಟ್ಟಿಹದು
ಬದುಕಿನ ಆಶಾಕಿರಣದ ಬೆಳಕಿಗೆ
ಬೆರಗಾಗುತಲಿಹುದು ಕತ್ತಲಲಿ,

ಒಡೆಯನ ಮನೆಯು ಗಾಳಿಯು ಪಂಕದಿ,
ಬೀಸುತಲಿಹುದು ಬಿಸಿಉಸಿರು
ಬೆವರಿನ ಹನಿಯು ಸುಗಂಧವಾಗಿ
ಹರಡಿದೆ ಮಹಡಿಯ ಮಹಲಿನಲಿ.

CC-0. In Public Domain. Digitization by eGangotri

ಚೇತನ

ಸಪ್ತಕುದುರೆಯು ರಥದಲಿ ಕುಳಿತು
ದಿನದ ಕಾಯಕದ ನಿನ್ನಯು ಪರಿಯನು
ಮಾನವರೇನು ಅರಿತರು ತಾನೆ—

ಎತ್ತರದಲಿ ತಿರುಗುತ ಅಲ್ಲಿ
ಬೆಳಕನು ನೀಡುತ ನೀತಿಯು ಸಾರುತ
ಮಾತಿಗೆ ಮೀರಿದ ಮೌನದಲಿ
ಅಂತರದಲ್ಲಿ ನಿಂತಿಹೆ ಏಕೆ?

ಜೀವಿಗೆ ಜೀವವ ನೀಡುವೆ ನೀನು
ಕಲೆಯಲಿ ಬೆಳಕನು ತುಂಬಿರುವೆ
ಕವಿಕೋಗಿಲೆಗಳ ಬದುಕಲಿ ನೀನು
ನಿತ್ಯಚೇತನವ ತುಂಬಿರುವೆ.

ಸಚರಾಚರಗಳ ಅಂತರಂಗದಲಿ
ಬದುಕಿನ ಹೋರಾಟದ, ಸ್ಥಿತ್ಯಂತರದಲಿ,
ಗೆಲುವನು ತುಂಬಿ ಜೀವಿಗೆ ಚೇತನ
ನೀಡುವ, ನಿನ್ನೀ ಪರಿಯನು, ಅರಿತವರಾರು?

ದಿಗಂತದಂಚಲಿ ತೋರುವ ನಿನ್ನ ಮುಖ,
ಹೊಸ ಬದುಕಿನ ಗೆಲುವಿಗೆ ನೀನು ಸಖ,
ನಿನ್ನಯು ಪ್ರಭೆಯಲಿ ಇರುತಿರೆ ನಾನು,
ನಿನ್ನಂತೆ ಎತ್ತರಕೇರಲು ಬಯಸುವೆನು.

CC-0. In Public Domain. Digitization by eGangotri

ಬದುಕು

ಬಯಲ ಬಿಸಿಲಲಿ ಸುಡುವ ದೇಹಗಳಲಿ
ಉರುಳುಚಕ್ರಕೆ ಸಿಕ್ಕಿ ಹಸಿರಕ್ತವಿಲ್ಲ, ಬರೀ ಬೆವರೇ ?
ದುಡಿವ ವ್ಯಕ್ತಿಯ ವ್ಯರ್ಥ ಶ್ರಮ, ಬದುಕು ಬರೀ
ಹೋರಾಟದ ಕ್ರಮ.

ಹೊತ್ತು ಏರುವ ಮುನ್ನ, ಹತ್ತಿ ಗಾಡಿಯ
ಜೀವನಚಕ್ರದಂತೆ ಹೆಜ್ಜೆಹೆಜ್ಜೆಗೂ ಉರುಳಿ,
ಬದುಕು ದುಸ್ತರವೆಂದು, ಒಣಗಿದ ದೇಹದಿಂದ
ಹೊರಹೊಮ್ಮುತಿದೆ, ಬಿಸಿ ಉಸಿರ ಅತೃಪ್ತಿ

ಹೇಗಾದರೂ ಬದುಕಬೇಕು ! ಬರ್ಬರ ಜೀವ ತಡೆಹಿಡಿಯಬೇಕು
ನನಗಾಗಿ ಅಲ್ಲವೇ ಅಲ್ಲ ! ನನ್ನವರಿಗಾಗಿ !
ಎತ್ತರದ ಮಹಲಿನಲಿ ನಿಂತವಗೆ,
ನಮ್ಮರಿವು ಇವರಿಗುಂಟೆ ? ಬದುಕಿನ ಬೇಕು ಬೇಡಗಳ
ಜಂಜಾಟದ, ಮುಗಿಲ ನೋಡುವ, ನಿಟ್ಟುಸಿರ ಬಯಕೆ.

ನಮ್ಮ ಬದುಕಿನ ರೀತಿ ಬೇರೆ ! ನಾನಿರುವೆ ದುಡಿಯಲು
ನೀ ನನ್ನ ಒಡೆಯ; ನಾನೋ ಶೋಷಿತ,
ಅಂತು ಉರುಳುತಿದೆ ಚಕ್ರ.

CC-0. In Public Domain. Digitization by eGangotri

ಅನ್ನದಾತ

ಭಾರತ ಭಾಗ್ಯವಿಧಾತ, ಓ ಬಡರೈತ,
ನಿನ್ನವನತಿಯು ಬರುತಿಹುದು ಖಚಿತ

ದೊಡ್ಡ ದೇಶದ ದಡ್ಡ ರೈತನೆ,
ಬಡಕಲು ದೇಹದ ರಕ್ತವಿಲ್ಲದ
ನೀನು, ಈ ದೇಶದಾ ಬೆನ್ನೆಲಬು
ನಿಜವೇನು ಇದ ನಂಬುವುದು

ಬಳಸಿದೆ ನಿನ್ನಜ್ಜನ ಕಾಲದ ನೇಗಿಲು
ಬಡಕಲು ಎತ್ತುಗಳ ಕಟ್ಟಿ
ದಿನಕರ್ಧ ಎಕರೆ ಉತ್ತು
ಉಂಟಾಯಿತು ನಿನಗೆ ತಲೆಸುತ್ತು,

ಬರಿಬಿಸಿಲಲಿ ಸುಡುವ ದೇಹದಿ
ಬೆವರಹನಿ ಸುರಿಸುತ ನೀನು
ಅಂತು ಬೆಳೆದೆ ಅರ್ಧಬಂಡಿ ಪೈರು
ಹಸಿದ ಹೊಟ್ಟೆಗೆ, ಅರೆಹೊಟ್ಟೆ ತುಂಬಿಸಲು,

ಓ ಅನ್ನದಾತ ನೇಗಿಲಯೋಗಿ
ಕ್ರಾಂತಿ ಮಾಡು ಇದು ವಿಜ್ಞಾನಯುಗ
ಬಿಡು ನಿನ್ನಜ್ಜನ ನಂಬಿಕೆ, ಮಂತ್ರ, ತಂತ್ರ
ಬಳಸು ಹೊಸ ತಳಿಯ ಬೀಜ, ಯಂತ್ರ

ನಂಬದೆ ಮಳೆ, ಭೂತಳದ ಜಲ ತೆಗೆ,
ರಸಗೊಬ್ಬರ ಕ್ರಿಮಿನಾಶಕ ಬಳಸಿದರೆ,
ನೀಬೆಳೆವೆ, ಬಂಪರ್ ಬೆಳೆ,
ವಿಜ್ಞಾನರೈತನಾಗಿ ಮಾಡು 'ಹಸಿರು ಕ್ರಾಂತಿ'

CC-0. In Public Domain. Digitization by eGangotri

ಒಂದು ಸಂಜೆ

ರವಿಯು ಪಡುವಣ ದಿಕ್ಕಿನಲಿ ಅಸ್ತಮಿಸೆ
ಹೊಂಬಣ್ಣದ ಕೆಂಪು ನದಿಯು ಜಲವೆಲ್ಲಾ,
ನೀರಮೇಲಣ ತಂಗಾಳಿ ಬೀಸೆ
ಮನಕೇನೊ ಆಪ್ಯಾಯಮಾನ,
ಗಾಳಿಗೆ ಬಂದ ಗಂಡು ಹೆಣ್ಣುಗಳ ಜೋಡಿ
ಅದೆಷ್ಟು ಚೆಂದ ನೋಡಲಾ ಜೋಡಿ
ಜಗವೆಲ್ಲಾ ಮರೆತು ಪರದಲ್ಲಿರುವಂತೆ ಭಾಸ
ಜೋಡಿಹಕ್ಕಿಗಳು ಮಧುರ ಕಂಠದಿಂದ
ಚಿಲಿಪಿಲಿಗುಟ್ಟುತ ಜಗಿಯೆ
ಅದೇನೋ ಕೊರತೆಯ ಅನುಭವ
ಕುಹು ಕುಹು ಎಂದು
ಜೊತೆಗಾಗಿ ಕರೆಯುತಿದೆ ಕೋಗಿಲೆ
ವೇದನೆ ಇನ್ನೂ ಉಲ್ಬಣಿಸೆ.

CC-0. In Public Domain. Digitization by eGangotri

ಇದು ಬದುಕೆ?

ಬದುಕು ತರುವ
ಬವಣೆಗಳಿಗೆಲ್ಲಾ
ಎಗ್ಗಿಲ್ಲದೇ ಬಗ್ಗಿಕೊಳ್ಳುತ್ತಾ
ಋಣದ ಕುಣಿಕೆಯುಲಿ ಸಿಕ್ಕು
ಬೀಳುವ ಗುದ್ದುಗಳಿಗೆಲ್ಲಾ
ಬೆನ್ನು ಬಾಗಿಸುತ್ತಾ
ತನ್ನತನವನ್ನೇ ಧಾರೆಯೆರೆದು
ಉದರನಿಮಿತ್ತಂ
ಬಗೆಬಗೆಯ ವೇಷ ಧರಿಸಿ
ಬಳಿವ ಬಣ್ಣಕೆ ಸಮನಾಗಿ
ಹೆಜ್ಜೆ ಹಾಕಿ ಹಾಡಿ ಕುಣಿದಾಗ
ಗೆಜ್ಜೆ ಚುಚ್ಚಿ ಕಾಲು ನೋವಾದರೂ
ನಗಲೇಬೇಕಾಗಿ ಬಂದಾಗಲೆಲ್ಲಾ
ನನಗೊಂದು ಸಣ್ಣ ಅನುಮಾನ
ನಾನು ಬದುಕಿದ್ದೇನೆಯೇ? ಎಂದು!
ಸಂಕಷ್ಟದ ಉರುಳಲ್ಲಿ
ಉಸಿರುಸಿಕ್ಕಿ ವಿಲಿವಿಲಿ
ಒದ್ದಾಡುತ್ತಾ ಹಿಂಸೆಯಾದರೂ
ಚಟುವಟಿಕೆಯ ನಟನೆಗಾಗಿ
ಕುದಿವ ಯಾತನೆ ಒಳಗೆ,
ಕಳೆಗುಂದಿದ ಮೋರೆಯ ಮೇಲೆ
ನಗುವ ಸೆರಗು ಹಾಸಿ
ಗೆಲ್ಲಬೇಕೆನ್ನುವ ಹವಣಿಕೆಯ
ಹೆಣಗಾಟದಲ್ಲಿರುವೆ ಬದುಕಿಗಾಗಿ.

CC-0. In Public Domain. Digitization by eGangotri

ಕರಿಮೋಡ

ಕರಿಮೊಡದಾಗಸದಲಿ
ಬೆಳ್ಳಿಚುಕ್ಕಿ ಮಿನುಗುವುದೆಂದು
ಬಹುದಿನದಿ ಕಾಯುತ್ತಿದ್ದೆ
ಚಾತಕ ಪಕ್ಷಿಯಂತೆ.

ಗಾಳಿಯಲಿ ತೇಲುವ ಮೋಡದಂತೆ
ಜೀವನದ ನೌಕೆ ಸಾಗುತಿದೆ
ಅರಿವಿಲ್ಲದ ಭುವಿಯಲಿಂದು
ನೆಲೆಯಿಲ್ಲದ ಬದುಕಿನಲ್ಲಿ.

ದಿನಗಳ ನಡುವೆ ಓಯಸಿಸ್‌ನಂತೆ
ಬಂಧು ಭಗಿನಿಯರು, ಬಂದು ನಡೆವರು,
ಅವರವರಿಗೆ ಅವರವರದೇ ಚಿಂತೆ
ಅರಿವಿಲ್ಲ ಯಾರಿಗೂ ದೇಶದಾ ಚಿಂತೆ.

ಭ್ರಷ್ಟ ಬದುಕಿನ ದಿನಗಳಲಿ
ಕೆಟ್ಟ ರಾಜಕಾರಿಣಿಗಳ ವಜ್ರಮುಷ್ಟಿಗಳಲ್ಲಿ
ದುಷ್ಟಕೂಟಗಳ ಭದ್ರಕೋಟೆಗಳಲ್ಲಿ
ಅಂಡಲೆಯುತಿರುವೆ, ಪಶುಗಳಂತೆ,

ಬಿಡುಗಡೆಯ ಬೇಡಿಯ ಬಯಸುವ
ಸುಜನರಿಗೆ ದೊರೆವುದೇ ಸನ್ಮಾನ
ನಮ್ಮರಿವು ನಮಗೆ ಇಲ್ಲದಿರುವಾಗ
ಬರಿಶೂನ್ಯವೀ ಬದುಕು, ಕರಿಮೋಡದಂತೆ.

CC-0. In Public Domain. Digitization by eGangotri

ಮೌನಗೀತೆ (ಪಿಕಗಾನ)

ವಸಂತಮಾಸದಳೊಂದು ದಿನ
ಬಹುದಿನದ ಬಯಕೆ ತುಂಬಿ
ಹಾಡುತಲಿಹುದು ಕೋಗಿಲೆ
ಮತ್ತೆ ಕಾಲ ಸಿಗದು ಎಂದು ?

ನಿನ್ನೆ ನೋಡಿದ ವೃಕ್ಷ ಇಂದು
ನನ್ನ ಎದುರೆ ಇಲ್ಲವಾಗೆ
ಮನದಿ ದುಃಖ ಉಕ್ಕಿ ಬಂದು
ಇನ್ನು ಬದುಕು ಹೇಗೆ ಎಂದು,

ಹಗಲು ಇರುಳು ನೋಡುತ
ಮನಕೆ ಪ್ರಶ್ನೆ ಹಾಕುತ
ಮನುಜ ಕುಲದ ಬದುಕು
ಹೇಗೆ ಹೇಳು ಶಾಶ್ವತ ?

ಹರಿವ ಜಲದ ತೊರೆಯು
ಕಲರವ ಭಾವ ಬತ್ತಿ
ಹಳೆಯ ಪಲುಕ ನೆನೆದು
ಮೆಲುಕು ಹಾಕುತ ನಿಂತಿಹೆ.

ಯಾವ ಹಾಡ ಹಾಡಲು
ಧ್ವನಿಯು ಇಲ್ಲವಾಗಿದೆ
ನನ್ನ ರಾಗ ನನ್ನಲಿಲ್ಲ
ಮೂಕಭಾವ ಮಿಡಿದಿದೆ.

CC-0. In Public Domain. Digitization by eGangotri

ನಿರೀಕ್ಷೆ

ದಿನದ ದುಡಿತಕೆ ಸಿಕ್ಕಿದ ದೇಹ
ಬಯಸುತಿಹುದು ಆಸರೆ
ಬಯಕೆ ಬತ್ತಿ ಭಾವ ಸುತ್ತಿ
ಮೂಡುತಿಹುದು ವೇದನೆ
ಅನಂತಕಾಲದಿಂದ ಬಂದ
ನನ್ನ ನಿನ್ನ ಅನುಬಂಧ
ಭಾವ ಬಂಧವಿಲ್ಲದೆ
ಬಿರಿದ ಮಡಕೆಯಿಲ್ಲಿ
ಬೇಯುತಿರುವ ಬೇಳೆಯಂತೆ
ಅರೆಬೆಂದು ಅರೆಸತ್ತು
ಸಿಟ್ಟು ಸಿರ ನಿಟ್ಟು
ಬಯಸುತಿಹುದು
ಕಾಯಕಲ್ಪ.

CC-0. In Public Domain. Digitization by eGangotri

ನೆನಹು

ಅಂದು ನಾನೊಬ್ಬನೆ ಅತಿಮೌನದಲಿ ಬಂದೆ
ಹೊಳೆಗೊಂದು ಹೊಳೆಬಂದು ಸಂಗಮಿಸಿದಂತೆ
ಅಂದು ಬಾಳಿಗೆ ಹೊಸಜೀವ ತುಂಬಿದಿರಿ,
ಇದು ನಮ್ಮದೆಂದೇ,
ಬಾಳನಂದನದಲ್ಲಿ ಮಂದಾರ ಹೂ ಅರಳಿತೋ
ನಮ್ಮೆಲ್ಲರೆದೆಯಲ್ಲಿ ಕಂಪ ತುಂಬಿ
ಜೇನ ಹನಿಯಾದೆವು ಮಧುಕೋಶದಲಿ
ಇದೆಂಥ ಬೆಸುಗೆ !
ಆ ಬಾಳಿನ ಬೆಳಕು ದೀಪವಾಯಿತು ನಮಗೆ
ಅನಂತಯಾತ್ರೆಯ ಹಾದಿಯಲಿ
ತೇಲುವೀ ದೋಣಿಗಳ ಬೆಸೆದುದೀ ಬಂಧ
ಬಾಳಿನಾನಂದ.

CC-0. In Public Domain. Digitization by eGangotri

ಬಾಳೊಂದು ಬಂಗಾರ

ತುಂಗೆಹೊಳೆಯ ತಂಗಾಳಿಯಲಿ
ಸಂಗೀತರಾಣಿ ಶಾರದೆಯ ಸನಿಹದಲಿ
ಸಂತೋಷ ತುಂಬಿರಲು ಸದಾಕಾಲದಲಿ
ಸುಖಮಯ ಜೀವನ ಶೃಂಗಗಿರಿಯಲಿ

ಸಂಗೀತ ಸಾಹಿತ್ಯ ಸಾನ್ನಿಧ್ಯರಾಣಿ
ಸುಖಕರ ಜೀವನ ನಿನ್ನಲಿ ವಾಣಿ
ಹಾಡಿ ಪೊಗಳುತ ಪರಿಚಿತನಾದೆ
ಪಾಂಡಿತ್ಯರತ್ನವನು ನೀಡೆ ಓ ಶಾರದೆ

ಬದುಕಿನಲಿ ಬೆಂದಾಗ
ಬಂಗಾರ ಸಿಕ್ಕಂತೆ ಸಂತೋಷವಾಗ
ಜೀವ ಜೇನು ಮಧುರ ಸವಿದಾಗ
ಜೀವನದಾ ಬಾಳು ಶೃಂಗಾರವಾಗ

ಶೃಂಗಗಿರಿ ಸಿರಿರಾಣಿ ಸಂಗೀತರಾಣಿ
ಶೃಂಗೇರಿ ಶಾರದೆಯ ಶ್ರೀದಿವ್ಯವಾಣಿ
ಬಂಗಾರ ಶಾರದೆಯೆ ಶರಣೆಂಬೆ ನಿನಗೆ
ಶಿವನತನುಜರು ನಾವು ಕಾಯು ನೀ ನಮಗೆ

CC-0. In Public Domain. Digitization by eGangotri

ಧನ್ಯ

ಈ ದಿವ್ಯನೆಲದಲಿ ಪುಟಿದು ಚಿಮ್ಮುತಲಿರುವ
ದೇವಲೋಕದ ದಿವ್ಯತೊರೆ ತುಂಗೆಯೇ
ನಿನ್ನ ಸಾನ್ನಿಧ್ಯದಾ ಪವಿತ್ರ ತೀರ್ಥದಿ ನಾನು
ದಿನದ ಧೂಳಿನ ಬಾಳ ತೊಳೆಯುತಿರುವೆ

ಓ ಶಾರದೆಯೆ ಮನದಂಗಳದಿ ಬೆಳೆದ ಬಯಕೆಯ ಬಳ್ಳಿ
ಯಲಿ ಹೂ ಅರಳಿಸಿದಾ ವಾಗ್ದೇವಿ
ನಿನ್ನ ಮೃದುಹಾಸ ಮುಗ್ಧ ಕೋಮಲತೆ ಸೋಂಕಿದರೆ
ಕಗ್ಗಲ್ಲಿನೆದೆಯಲ್ಲೂ ಹೂವರಳದೇನು !

ಬೇಸರವಾದಂದಿನ ದಿನದಲಿ
ಪ್ರಗತಿಪಥ ತೋರಿದ ದೇವತೆಯಾದೆ,
ನೀನೀವ ಸಂತಸಕೆ ನಾವೇನು ಕೊಟ್ಟೇವು
ಸಾಲುಗಾರರೋ ನಾವು ನಿನ್ನ ಮುಂದೆ

ಜನುಮಗಳ ಹಾದಿಯಲಿ ಉರುಳುವೀಬಾಳ
ರಥಕೆ ಸಾರಥಿಯಾಗಿರು ದೇವಿ
ಭಕ್ತಿಶ್ರದ್ಧೆಯಲಿ ಹೊಂಬೆಳಕು ಮೂಡಿ
ಬಾಳದಾರಿಯು ತೋರುತಿರಲಿ.

CC-0. In Public Domain. Digitization by eGangotri

ರೈತನ ಹಾಡು

ರೈತನ ಬದುಕು, ಚೆಲುವಿನ ಸೆಲೆಯು
ದುಡಿವರು ಹೊಲದಲಿ, ಹಾಡುತ ಹಗಲೆಲ್ಲಾ
ಹೊತ್ತಾರೆ ಎದ್ದು, ದೇವಗೆ ಕೈಮುಗಿದು,
ನೇಗಿಲ ಹೊತ್ತು ಹರುಷದಿ ನಿಂತು,
ಬೆಳಕದೇವನ ಕಂಡು, ಶರಣೆನ್ನುತೆ,
ನಿನ್ನೀ ಬದುಕೇ ನಮಗೆನ್ನುತ,
ಕಪಟಕಾಮನೆ ಮನದಲಿ ಬಯಸದೆ,
ಎಲ್ಲವು ನಿನ್ನ ಲೀಲೆಯು ಎನ್ನುತ,
ಹರುಷದಿ ಹೊಲಗದ್ದೆಯ ಉತ್ತು,
ಬಿತ್ತಿದ ಬೀಜವ, ದೇವನ ನೆನೆದು,
ದೇವನಾ ದಯೆಯು ಅನಂತವಾಗಿ,
ಬಿತ್ತಿದ ಬೀಜ ಫಲ ಎರಡಾಗಿ,
ಬಯಸಿದಾ ಬದುಕು ಬಂಗಾರವಾಗಲು,
ರೈತನ ಹೃದಯದಿ ಹರುಷದ ಹೊನಲು.
ಬೆಳೆದ ಪೈರು ಕಣವನು ತುಂಬಲು,
ಸಂತಸದಿಂದ ಸುಗ್ಗಿಯ ಮಾಡುತ,
ಹಿಗ್ಗಿದ ರೈತ ದೇವನ ನೆನೆಯುತ,
ಎಲ್ಲವೂ ನೀನೆ, ನಿನ್ನದೆ ಎಲ್ಲಾ,
ಎನ್ನುತ ಕಾಳಿನ ರಾಶಿಯ ಮಾಡಿ,
ದೀನದಲಿತರಿಗೆ ದಾನವ ಮಾಡಿ,
ಕೊಡುವವನೊಬ್ಬನೆ ಕೈತುಂಬ ದೇವ,
ನಾವು ನೀಡುವುದೆಲ್ಲಾ ದೇವನೇ ಬಲ್ಲ.
ಹಿಗ್ಗುತ ಬದುಕನು ಕಳೆದಿಹನು,
ದೇವರ ನೆನೆಯುತ ನಲಿದಿಹನು.

CC-0. In Public Domain. Digitization by eGangotri

ಮುಂಗಾರ ಕರಿಮೋಡ

ವಸಂತ ಕಳೆದಾಯಿತು,
ನೀ ಬಂದೆ ಕರಿಮೋಡ ತುಂಬಿಕೊಂಡು
ಮೋಡಗಳಿಗೆ ಮಿಂಚಿನ ಸರಮಾಲೆ ಧರಿಸಿ
ಮೋಡಮೋಡಗಳ ಚುಂಬನದಿ
ನೀ ಬಿದ್ದೆ ಹನಿಯಾಗಿ ಕೆಳಗೆ
ನದಿಯಾಗಿ ಹರಿದೆ
ಪಾಮರರ ಪಾಪ ತೊಳೆದೆ
ಜಲಪಾತವಾಗಿ ಬಿದ್ದು
ಬೆಳಕಾಗಿ ನಿಂದೆ
ಆಣೆಕಟ್ಟುಗಳಲಿ ನಿಂದು
ಜೀವಕೆ ಜೇನು ತುಂಬಿದೆ
ಬೆಳಕಾಯ್ತು ಗುಡಿ ಗುಡಿಸಲೆಲ್ಲಾ
ಹರ್ಷಿಸಿತು ಜಗ ನಿನ್ನಿಂದೆಲ್ಲಾ

CC-0. In Public Domain. Digitization by eGangotri

ಹೌದಪ್ಪಗಳು

yes manಗಳು ಸಾರ್ ಇವರು yes manಗಳು
ಒಳಿತು ಕೆಡಕುಗಳ ನೋಡದೆ
ಎಲ್ಲದಕ್ಕೂ ಹೌದೆನ್ನುವ ಇವರು
yesmanಗಳು ಇವರು yesmanಗಳು
ಸತ್ಯದ ನುಡಿಯು ಮರೆಮಾಡಿ
ಬಣಗು ಮಾಲಿಗೆ ಬಣ್ಣ ಕಟ್ಟಿ
ಬಾಲಜುಟ್ಟು ಕಟ್ಟುವ ಇವರು
ತಮಗೇ ಕುತ್ತು ಬಂದರೆ ಕೊನೆಗೆ
ಹಳ್ಳಕೆ ತಳ್ಳಿ ದಡದಲಿ ಕೂರುವರು
ಇವರು yesmanಗಳು ಸಾರ್ ಇವರು yesmanಗಳು
ಮಾತುಬಲ್ಲ ಕೋಳಿ ಎಂದು
ಎಲ್ಲ ಬಲ್ಲೆ ನಾನು ಎಂದು
ಅದನು ಇದನು ಸೇರಿಸಿ ತಂದು
ಅಲ್ಲಿ ಇಲ್ಲಿ ಕುಳಿತು ಬೊಗಳುವ
ಇವರು yesmanಗಳು ಸಾರ್ ಇವರು yesmanಗಳು
ಹಣದ ಮೇಲಿನ ಆಸೆಗಾಗಿ ತನ್ನತನವನ್ನೇ ಮರೆತು,
ತನ್ನ ಘನತೆಯೇ ಅದು ಎಂದು
ತನ್ನ ಇರುವಿಗೇ ಸೊನ್ನೆಯಾಗಿ ಬಾಳು ನಡೆಸುವ ಇವರು
yesmanಗಳು ಸಾರ್ ಇವರು yesmanಗಳು
ಮತ್ತೆ ನೋಡಬೇಕೇ ಇವರ
ಭಾರಿ ಸೂಟು ಧರಿಸಿ, ಖಾಲಿ ತಲೆಯ ಹೊತ್ತು
ಗತ್ತಿನಲಿ ನಡೆಯುವರು, ಇವರೇ ನಮ್ಮ ಮಾತಿನ ಶೂರರು
ಇವರು yesmanಗಳು ಸಾರ್ ಇವರು yesmanಗಳು.

CC-0. In Public Domain. Digitization by eGangotri

ಕ್ರಾಂತಿ

ಮಿತ್ರ ನಿದ್ರೆ ಬಿಟ್ಟೇಳು, ಇಲ್ಲದಿದ್ದರೆ ನೀ ಸತ್ತೆ,
ನಿನ್ನ ನೆರೆ ನೋಡು ಹೇಗೆ ಚಿಗುರುತಿದೆ,
ನಿನ್ನ ಸ್ವಾಭಿಮಾನವೇ ನಿನಗಿಲ್ಲವೇ,
ಬರಿಬಾಳ, ರಣಹೇಡಿಯಾಗುವೆಯಾ ?
ಸುತ್ತಲಿನ ಹೊಡೆತ ಬಡಿತಗಳಿಂದೆಚ್ಚೆತ್ತು,
ಮನದ ಜಡತೆಯನೊದ್ದು,
ನಿನ್ನ ಮನಕೆ ಶಾಂತಿ ಹುಡುಕುವೆಯಾ ?
ಇಲ್ಲವೇ ಮತ್ತೆ ಗುಲಾಮಗಿರಿಯ ಬಯಸುವೆಯಾ ?
ಹಿರಿಯ ಮುದಿ ವೃಕ್ಷಗಳನೊದ್ದು
ನಿನ್ನತನಕೆ ಅದನೊದ್ದು,
ಪುಟಿದು ಮೇಲೆದ್ದರೆ, ನೀ ಎದ್ದು,
ಬೀಳುವವು ಮುದಿಮರಗಳ ಎಲೆ ಬಿದ್ದು.

CC-0. In Public Domain. Digitization by eGangotri

ಭಾಷಾಸಮರ

ಮಾನವ ಹೃದಯವ ನಿರ್ಮಲಮಾಡುವ
ಭಾಷೆಯು ಕನ್ನಡವಾಗದೇ
ಯಾರ ಭಾವನೆ ಯಾವುದೋ, ಏನೋ,
ಅವರವರೆದೆಗೆ ಅದೆ ಬಂಗಾರ

ಅಖಂಡವಾಗಿಹ ಭೂಮಂಡಲದಲಿ
ಪ್ರಾಂತಭಾಷಾ ಗೊಂದಲ, ಹೊಡೆದಾಟ
ಸ್ವಾರ್ಥಬದುಕಿನ ಸೆಣೆಸಾಟ
ನೋಡುವುದೇನು ಇವರಾಟ

ನಾಡನುಡಿಕಟ್ಟಿ ಬೆಳೆಸಲು ಹಿರಿಯರು
ತೆತ್ತರು ಅಮೂಲ್ಯ ಜೀವವನು
ಉಳಿಸುವರೇನು? ಅವರಾಸೆ ಕನಸನು
ಬರಿ ಕನಸಾಯಿತೇ ಈ ಬದುಕು

ಒಂದೆಡೆ ಬೇಕುಬೇಡಗಳ ಬಡಿದಾಟ
ನಡೆದಿದೆ ಮಹಲಲಿ ಶೀತಲ ಸಮರ
ಅರಿತವರುಂಟೆ ಈ ಬವರ
ಕನ್ನಡಕ್ಕಾಯಿತೇ ? ಈ ಸಮರ.

CC-0. In Public Domain. Digitization by eGangotri

ನಮ್ಮೂರು

ತೆಂಗಿನಸೀಮೆಯ ಚೆಲುವನು ಕಾಣಲು
ಬನ್ನಿರಿ ನೀವು ನಮ್ಮೂರಿಗೆ
ಅರೆಮಲೆನಾಡಿನ ಊರದು ನೋಡು
ವಿಧವಿಧ ಬದುಕಿನ ಜನರನು ಕಾಣು.

ದುಡಿಮೆಯೆ ದೇವರೆನ್ನುತ ಬಾಳುವರಿಲ್ಲಿ
ಮಣ್ಣಲಿ ದೇವರ ಕಾಣುತಲಿ
ಬಾಳಲಿ ಬೆಳಕನು ಕಾಣುವ ಬಯಕೆಗೆ
ನಿನ್ನೆಯ ಕನಸನು ನನಸಾಗಿಸಲು

ಕಷ್ಟಕೆ ಫಲವುಂಟೆಂದರಿತು,
ಉದಯಕಾಲಕೆ ಹೊಲದಲಿ ನಿಂದು,
ಮಣ್ಣಲಿ ಬಂಗಾರ ತೆಗೆಯುವರು,
ಬದುಕನು ಸಾರ್ಥಕಪಡಿಸುವರು,

ರಾಗಿ, ಜೋಳ, ಅವರೆ, ತೊಗರಿ,
ತೆಂಗು, ಕಂಗು, ಕಬ್ಬು, ಭತ್ತ,
ನವಧಾನ್ಯ ಬಿತ್ತಿ ಬೆಳೆವರು
ಬೆಳವಲದ ಮಣ್ಣಮಕ್ಕಳು
ಇವರೆ ನಮ್ಮ ಕಂಗಳು.

CC-0. In Public Domain. Digitization by eGangotri

ನಮ್ಮ ಮನೆ

ಹಕ್ಕಿಗೂಡು ನಮ್ಮ ಮನೆ
ಪುಟ್ಟದಾಗಿ ಇರುವುದು
ಮನೆಯಲಮ್ಮ ಅಪ್ಪನಮ್ಮ
ಮುದ್ದಿನಲಿ ಬೆಳೆಸಲು
ರೆಕ್ಕೆ ಬಲಿತ ಹಕ್ಕಿಯಾಗಿ
ಹಾರಿಹಾರಿ ದೂರಸಾರಿ
ನೂರ ಊರ ಸುತ್ತಿ ನಾನು
ಹತ್ತು ವಿಷಯ ಕಲಿತೆನು,
ಅಮ್ಮ ಕೊಟ್ಟ ಪ್ರೀತಿ ಬದುಕು
ಅಪ್ಪ ಕೊಟ್ಟ ಚುರುಕು ಬುದ್ಧಿ
ನನ್ನ ಬಾಳ ಹಾದಿಗೆ
ಅಣ್ಣಾರಿಬ್ಬರು ಕೊಟ್ಟರೆನಗೆ
ಒಲುಮೆವೆತ್ತ ಬದುಕು ದಾರಿ
ತಂಗಿ ಕೊಟ್ಟ ತಿಂಡಿತೀರ್ಥ
ಹೃದಯ ಜೇನಿನಂತೆ ಸಿಹಿಯು
ಉಂಡುಬೆಳೆದ ನನ್ನ ಕಾಯ
ನೆನೆಯುತಿಹುದು ಹಗಲು ನಿಶೆಯು
ನಮ್ಮ ಚಿಕ್ಕಮನೆಯು ಇಂದು
ಬೆಳೆದು ದೊಡ್ಡದಾಗಿದೆ
ಮನೆಯ ತುಂಬ ಚಿಕ್ಕಮಕ್ಕಳು
ನಗುತ ನಲಿದು ಬೆಳೆದಿವೆ,
ಹೃದಯ ತುಂಬಿ ಅಪ್ಪಅಮ್ಮ
ಹರಸುತಿಹರು ನಮ್ಮನು
ನಿಮ್ಮ ಬಾಳಭೂಮಿಯೆಲ್ಲ
ನಂದನವನವಾಗಲೆಂದು.

CC-0. In Public Domain. Digitization by eGangotri

ಮಿನುಗುತಾರೆ

ನೀಲಾಕಾಶದಿ ಮಿನುಗುವೆ ನೀನು
ಭೂತಳದಲಿ ಇರುತಿಹೆ ನಾನು
ನಮ್ಮೀ ಅಂತರ ಬಹುದೂರೇನು ?
ಅರಿತವನೇನು ನಿನ್ನನು ನಾನು ?

ದೂರದ ಅಂತರದಿ ತಿರುಗುವೆ ನೀನು
ಕಾಣದು ನಿನ್ನ ಚಲನೆಯು ಇಲ್ಲಿ
ತಿರುಗುವೆವು ನಾವು ನೆಲೆ ಇಲ್ಲದಿಲ್ಲಿ
ನನಗೂ ನಿನಗೂ ಅಂತರವೆಲ್ಲಿ ?

ನಶ್ವರ ಬಾಳಿನ ಗೋಳಿದು ಇಲ್ಲಿ
ಭುವನದ ಬಾಳನು ಅರಿತವರಿಲ್ಲ
ನಿನಗಾವುದರ ಅರಿವೇ ಇಲ್ಲ
ನೀನೋ ನಿಶ್ಚಿಷ್ಟದಿ ಇರುತಿಹೆ ಅಲ್ಲಿ.

ಭಾವಜೀವಿಗಳ ಕಲ್ಪನೆಯು ಕುಡಿಯಾಗಿ
ಕವಿಗಳ ಬದುಕಿನ ನೆಲೆಸೆಲೆಯಾಗಿ
ಅನಂತ ವಿಶ್ವದ ಆಕಾಶದಲಿ
ಮಿನುಗುವೆ ನೀನು ನಿನ್ನಂತರದಲಿ.

CC-0. In Public Domain. Digitization by eGangotri

ದೀಪಾವಳಿ

ದುಷ್ಟಶಕ್ತಿನಾಶಗೊಳಿಸಿ
ಶಿಷ್ಟರನ್ನು ಬದುಕಲುಳಿಸಿ
ಜಗದ ಸುಖಕೆ ನಾಂದಿಯಾಗಿ
ಬೆಳಕ ಕೊಟ್ಟ ದೀಪಾವಳಿ,
ಇಂದು ಏಕೋ ಮಂಕು ಹಿಡಿದು
ಕಂದು ಬೆಳಕ ಚೆಲ್ಲಿದೆ
ಹರುಷವೆಲ್ಲ ಮನದಿ ಸತ್ತು
ಮೂಕಭಾವ ತೋರಿದೆ
ಜನರ ಮನಕೆ ಹರುಷ ನೀಡಿ
ಮನದ ಬಯಕೆಗೆ ದೂರವಾಗಿ
ನಿಂತಿತೇಕೆ ಈ ದಿನ
ಬಲ್ಲವರಾರು ಇದನ
ದೇಶದೆಲ್ಲೆಡೆ ರಕ್ತದೋಕುಳಿ
ಜನತೆಗೆಲ್ಲಿದೆ ಕಳಕಳಿ
ಮನುಜಕುಲದ ಚೆಂಡಿನಾಟ
ಭಯದ ಬದುಕಿನ ಒಡನಾಟ
ಮತ್ತೆ ಏಕೆ ವಾಮನ
ಹುಟ್ಟಿಬರನು ಈ ದಿನ
ದುಷ್ಟಶಕ್ತಿ ಮೆಟ್ಟಿ ನೆಲಕೆ
ಶಾಂತಿಸುಖವ ನೀಡನೆ
ಇರುವರೆಲ್ಲಡೆ ದುಷ್ಟರೆಂದು
ಭಯದ ಜೀವಿಗಳನು ಕಂಡು
ಮಿಣುಕುದೀಪವಿಂದು
ಹೆದರಿ ಕಂದುಬೆಳಕ ಚೆಲ್ಲಿದೆ.

CC-0. In Public Domain. Digitization by eGangotri

ನಮ್ಮವರು

ಹುಟ್ಟಿನಿಂದ ಬತ್ತಲೆಯಲಿ ಬಂದು
ಆಸೆ ಆಮಿಷಗಳ ಗೋಪುರ ಕಟ್ಟಿ
ಜನತೆಗೆ ಅಹಿತವಾದರೂ ನಾನು
ಮಾಡಿದೆ ಎಂದು ಬೇಡದ್ದ ಮಾಡಿ ಮೇಲೆದ್ದವರು

ಸ್ವಾರ್ಥಬದುಕಿನ ಅಹಂನಿಂದ
ಸತ್ಯವನ್ನು ಶೂನ್ಯವಾಗಿಸಿ
ಸುಜನರ ಬಾಯಿಗೆ ಬೀಗಹಾಕಿ
ಮನುಷ್ಯತ್ವ ಬಿಟ್ಟು ಮೃಗವಾದರು,

ಹೌದಪ್ಪಗಳ ಹಿಂಬದಿಯಲಿಟ್ಟು
ಗೋಮುಖವ್ಯಾಘ್ರಗಳಾಗಿ
ಜನರ ರಕ್ತ, ಬೆವರ ಸುರಿಸಿ
ಗತ್ತು, ಗೈರತ್ತಿನಿಂದ ಸಿರಿವಂತರಾದವರು,

ಯುಕ್ತಿ ಕುಯುಕ್ತಿಗಳಿಂದ ಮೇಲೇರಿ
ಸ್ನೇಹದ ಬದುಕಿಗೆ ಸಂಕೋಲೆ ತೊಡಿಸಿ
ಯಾರಿಗೂ ಬೇಡವಾದರೂ ಕೈ ಎತ್ತಿ
ಕೈಮುಗಿದು ತಲೆಗಡುಕರಾದವರು.

ಕಳ್ಳತನ ಮೋಸಗಳಿಂದ ಮಿಂಚುಗುಡುಗಾಗಿ
ವಿಷದ ಬಿರುಗಾಳಿಯಾಗಿ ಬೀಸಿ
ಜಲಪ್ರಳಯ ಮಾಡಿ
ಸ್ವಾರ್ಥದಡಿಪಾಯದ ಮೇಲೆ ಗೋರಿ ಕಟ್ಟಿದವರು.

CC-0. In Public Domain. Digitization by eGangotri

ಎಲ್ಲರೂ ನಮ್ಮವರೆಂದು
ಯಾರ ಪಾಲಿಗೂ, ಇಲ್ಲದವರಾಗಿ,
ಮಹಡಿಯ ಕತ್ತಲೆ ಕೋಣೆಯಲಿ
ಸ್ವಾರ್ಥಿಗಳೊಂದಿಗೆ ಮೆರೆದವರು.

ಕತ್ತಲೆರಾಜ್ಯದ ಅರಸುಗಳಾಗಿ
ಬತ್ತಲೆ ದೇಹದ ಸುಖವನು ಪಡೆಯುತ
ನಿತ್ಯವು ದೇಗುಲ ದರ್ಶನ ಮಾಡುತ,
ನಾಟಕ ಬದುಕಿನ ನಟರಿವರು.

ನಂಬಿದ ಜನತೆಗೆ, ದೂರದ ಬೆಟ್ಟವಾಗಿ,
ಕೃತಕ ಬಡತನದ ಕೂಪ ನಿರ್ಮಿಸಿ,
ನಂಬಿಸಿ, ವಿಷದ ಕೂಳ ತಿನ್ನಿಸಿ,
ಗೋರಿಗಳ ಮೇಲೆ, ಮಹಡಿಮನೆ ಕಟ್ಟಿದವರು.

CC-0. In Public Domain. Digitization by eGangotri

ಗಾಂಧಿ

ಗಾಂಧಿ ಈ ದೇಶದ ಸೊತ್ತು
ಅವರಿಂದಾಗಲಿಲ್ಲ ಯಾವುದೇ ಆಪತ್ತು
ದೊರೆತದ್ದೆಲ್ಲಾ ಬರಿ ಸಂಪತ್ತು.

ದೇಶದ ಉದ್ದಗಲಕೂ ನಡೆದರು ಗಾಂಧಿ
ಜನಮನದಾ ಕೊಳೆ ತೊಳೆಯಲು ಎಂದು
ಕೋಲನು ಹಿಡಿದು ನಡೆದರು ಮುಂದೆ

ಅಸ್ಪೃಶ್ಯತಾ ಕೊಳೆ ಕೀಳಲು ಅವರು
ನಿಂತರು ಹರಿಜನ ಮಧ್ಯದಲಿ
ಮನುಜಕುಲ ಒಂದೇ ಎಂದು ಸಾರಿದರು.

ವೃದ್ಧಮೂರ್ತಿಯು ದೃಢದ ನಿಲುವು
ಜನರಲಿ ಮೂಡಿತು ಒಲವು
ಸತ್ಯ ಅಹಿಂಸೆಯಲ್ಲೇ ಸಿಕ್ಕಿತು ಗೆಲವು

ರಾಷ್ಟ್ರಪಿತ ಎಂದರು ಕೆಲವರು
ಶಾಂತಿವಾದಿ ಎಂದರು ಹಲವರು
ಎಲ್ಲರ ಬಲವೇ ಪಿತನ ಗೆಲವು

ಆಸೇತು ಹಿಮಾಚಲದವರೆಗೆ
ಮೂಡಿದೆ ಎಲ್ಲೆಡೆ ಗಾಂಧಿಯ ಬಿಂಬ
ನಗುತಿದೆ ಇಂದು ಆ ಪ್ರತಿಬಿಂಬ.

CC-0. In Public Domain. Digitization by eGangotri

ಜಂಜಾಟ

ಯುವಕನಿಗೆ ಮೀಸೆ ಮೂಡುವಾಗ
ಕಟ್ಟಿದ ಹಗಲುಗನಸಿನಲಿ ಏನೇನೊ ಹೊಳೆದಿತ್ತು
ದೇಶ ಕಾಣದಾಗಿತ್ತು,
ದೇಹದ ಬಯಕೆ ಅತಿಯಾಗಿತ್ತು
ಉದ್ಧಟತನದಿಂದ ಮನ ಹೆಮ್ಮರವಾಗಿತ್ತು.
ಇರುವನ್ನೇ ಮರೆಸಿತ್ತು, ನೋಡಿದೆಡೆಯಲ್ಲೆಲ್ಲಾ
ಏರಿಳಿತ ನೆನೆದಿತ್ತು.
ಮನದಲಿ ಉಬ್ಬುತಗ್ಗುಗಳ ಅಲೆದಾಟ
ಯೌವನದ ಹುಚ್ಚಾಟ,
ಜೀವನ ಜಂಜಾಟದಲಿ ವಯಸ್ಸಿನ ತಿಕ್ಕಾಟ,
ದಿನಕಳೆದಂತೆ ಜೋತಿತ್ತು
ಏರಿದ್ದ ಮೀಸೆ.

ಹಂಬಲ

ಎಷ್ಟು ಕೇಳಿದರೇನು
ವೇದಶಾಸ್ತ್ರ ಭಗವದ್ಗೀತೆಯನು
ಬಿರಿವವರೆಗೆ ಕರ್ಣಪಟಲಗಳು
ಎಷ್ಟು ತಡೆದರೇನು
ಅರಿಷಡ್ವರ್ಗಗಳ
ಪಂಚೇಂದ್ರಿಯಗಳ
ಮನಸೋತ ರಾವಣನಂತೆ
ಮುಬ್ಬುತುಂಬಿದ ಕಾಯಕೆ
ಹರೆಯಕೆ ಕೊಂಚವೂ ಕೇಳಲಿಲ್ಲ
ತಂಬೆಲರಲಿ ಸುಳಿದ
ಬಳಿಯು ಬಂದಿಷ್ಟು ಸವಿದನಿಗೆ
ಕಾಡಿತು ಮನವು
ಶಯನ ಶಯ್ಯೆಯಲಿ
ಹಲವು ಆಸೆಯ ನೆನೆದು
ಆಸೆಯ ನೆನೆಕೆಗೆ
ನಿದ್ದೆ ಬರಲಿಲ್ಲ ಬೆಳ್ಳಂಬೆಳಗು
ಬಯಕೆ ಬಲವಾಗಿ
ಭಾರವಾಗಿತ್ತು ಕಾಯ
ಮೌನವಾಗಿ.

CC-0. In Public Domain. Digitization by eGangotri

CC-0. In Public Domain. Digitization by eGangotri

ಅನುರಾಗ

ನಾನೊಂದು ಜೇನುನೊಣ
ನೀ ಬರಿದ ಕುಸುಮ
ಹರೆಯುದಾ ದುಂಬಿಯಾಗಿ ನಾ
ನಿನ್ನ ಮೇಲೆ ಹಾರುವಾಸೆ
ನಿನ್ನಧರ ಮಧುವನ್ನು
ಕಡೆತನಕ ಹೀರುವಾಸೆ
ನಿನ್ನ ನುಡಿಮೊಗ್ಗುಗಳಲಿ
ಕುಳಿತು ಚುಂಬಿಸುವಾಸೆ
ನಗುವೊಗದ ನಿನ್ನ ಬಿಂಬಾಧರದ
ಚೆಂದುಟಿಗೆ ಅಂಟಿಕೊಂಡಿರುವಾಸೆ
ನಿನ್ನೊಡಲ ಸವಿಸುಖವ
ಅನುದಿನವು ಪಡೆಯುವಾಸೆ.

CC-0. In Public Domain. Digitization by eGangotri

ಗೆಳತಿಗೆ

ಪರಿಮಳ ತುಂಬಿನಿಂತ ಸಂಪಿಗೆಮರವೆ
ನಿನ್ನ ಪರಿಮಳದ ಮಧುವಿನ ಬಯಕೆಯಾಗಿ
ಹುಟ್ಟಿಬೆಳೆದ ಮಣ್ಣ ಮರೆತು
ಹಬ್ಬಿದೆ ನಿನ್ನ ತಬ್ಬಿದೆ,
ನಿನ್ನಿಂದ ಬದುಕು ಪಡೆಯಿತು ಸಾಫಲ್ಯ
ಬದುಕಿನಲಿ ಅನೇಕ ಅವಸ್ಥಾಂತರ ಪಡೆದನಂತರ
ಆವರಿಸುವುದು ಸರ್ವರನು ಮುಪ್ಪು
ಗೆಳತಿ ಒಪ್ಪುವೆಯಾ ಮುಪ್ಪಿಗೆ ನೀನು
ಪತ್ತೆ ಸಿಗದು ಮುತ್ತು ನಿನಗೆ
ನನಗೆ ನಿನ್ನ ಮಧುವಿನಾಸೆ
ಗೆಳತಿ ನೀಡುವಿಯಾ ಕೊನೆಯಾಸೆ.
ಚಿರಪ್ರೀತಿಯ ಚಿಹ್ನೆಯಾಗಿ
ಮುತ್ತನೊಂದನಿತ್ತು
ಸಾರ್ಥಕಗೊಳಿಸು ಗೆಳೆತನ.

CC-0. In Public Domain. Digitization by eGangotri

ವಾಸ್ತವ

ಹಿಂದೂದೇಶದ ಪ್ರಜ್ಞಾಪ್ರಜೆಗಳು
ಭಾರತೀಯರು ನಾವು ಭಾರತೀಯರು

ನಾಡ ಬೀದಿಗಳಲಿ ಜಾತಿ ಬೀಜವ ಬಿತ್ತಿ
ಬೀದಿ ಬೀದಿಗಳಲಿ ಗುಡಿ ಕಟ್ಟಿದವರು

ಮೂಢನಂಬಿಕೆಗಳಿಗೆ ನೀರೆರೆದು
ತಮ್ಮ ಹಸಿವ ತುಂಬಿಸಿಕೊಂಡವರು

ನಾಡಭಾಷೆಗೆ ಕಿತ್ತಾಡಿ
ನಾಡ ಗಡಿ ಕಟ್ಟಿದವರು

ಅಳಿದವರ ನೆನೆಯುತ್ತಾ
ಪುಣ್ಯತಿಥಿ ಮಾಡುವವರು

ಬಡತನದ ಬೇಗೆ ಕಾಡುತಿರಲು
ಪರದೇಶ ಸುತ್ತೋ ವಾಗ್ಜಾಣರು

ಮಾತಿನ ಮಹಲಲಿ ಕುಳಿತು
ಕಾಗದದ ಮೇಲೆ ಭವಿಷ್ಯ ಸೃಷ್ಟಿಸರು

ಹಸಿದ ಅಬಲೆಯ ದೇಹವೀಣೆಯ ಮೀಟುವ
ಕಾಮನಾದೋಪಾಸಕರು.

ಒಂದೇ ತಾಯ್ ಮಕ್ಕಳೆಂದು
ಹೃದಯಕ್ಕೆ ಗುಂಡಿಕ್ಕುವವರು.

CC-0. In Public Domain. Digitization by eGangotri

ಪ್ರತಿಭೆ

ಎಲ್ಲಿ ಹೋಗುವಿರಿ
ನಿಲ್ಲಿ ಪ್ರತಿಭೆಗಳೇ
ತಾಯ್ನೆಲವ ತೊರೆವುದೇ ನೀವು ?
ಪರನಾಡ ಸುಖವು
ತರವಲ್ಲ ನಿಮಗೆ
ತಾಯ್ನೆಲವ ಮರೆವುದೇ ನೀವು ?

ತಾಯ್ನಾಡ ತ್ಯಜಿಸಿ
ಪರದೇಶಿ ಎನಿಸಿ
ತೊರೆಯಬೇಡಿರಿ ದೇಶ
ಈ ನಮ್ಮ ದೇಶ
ಕಲೆ ಸಂಸ್ಕೃತಿಯ ಕೋಶ
ಇಲ್ಲಿಲ್ಲ ಯಾವ ದೋಷ

ಪರರಾಷ್ಟ್ರದಾ ಪ್ರೀತಿ
ಅರಿವಿಲ್ಲದಾ ಮಡಿಮೆ
ಬಾಡಿಗೆ ಎತ್ತಿನಂತೆ
ಈ ನಾಡಿನಲ್ಲೇ
ಮಡಿದರೇ ನಮಗೆ
ಬಾರದು ಬಡತನದ ಬೇಗೆ

CC-0. In Public Domain. Digitization by eGangotri

ಓ ಬನ್ನಿ ಬನ್ನಿ !
ಹೊಸ ಅನುಭವವ ತನ್ನಿ
ನವನಾಡ ಕಟ್ಟಬನ್ನಿ
ನೀಡುವೆವು ನಾವು
ತುಂಬು ಸಹಕಾರ
ನೀಗುವೆವು ಭಂಗ ದೂರ

ನಾಡಿನಾ ಬಡತನವು
ಬಿಡಲಿಲ್ಲ ನಮ್ಮ
ಬರಲಿಲ್ಲ ಕರುಣೆ ನಿಮಗೆ
ನಾಡಿನಾ ಸೇವೆ
ನಿಮಗಿದೂ ನೋವೆ
ಪ್ರತಿಭೆಗೆ ನೆಲೆಯು ಇದುವೆ

ನಾಡಳೆಲ್ಲರೂ ಕೂಡಿ
ಶ್ರಮದ ದುಡಿಮೆಯ ಮಾಡಿ
ತನ್ನರಿವೆ, ಗುರುವು ಆಗಿ,
ಕಾಯಕದಿ ಕೈಲಾಸ ಕಂಡು
ನಾಡ ಬೆಳಸೋಣ ಬನ್ನಿ.

CC-0. In Public Domain. Digitization by eGangotri

ತುಡಿತ

ನೂರು ಭಾವ ಮಿಡಿವ
ನಿನ್ನ ಮನದ ನುಡಿಗಳು
ಹೃದಯ ತುಂಬಿ ತುಟಿಗೆ
ಬರದೆ ಇಂಗಿತೇಕೆ ಗೆಳತಿ?
ಹೇಳಲಾಗದಂಥ ತುಡಿತ
ನಿನ್ನಲೇನೋ ಮೂಡಿದೆ
ಭಾವಬಿಂಬವಂತೆ ನಿನ್ನ
ಹೊಳೆವ ಕಣ್ಣಲೇನೋ ತೋರಿದೆ
ಬೂದಿ ಮುಚ್ಚಿದ ಕೆಂಡದಂತೆ
ನಿನ್ನ ಮನದ ಆಸೆಯು
ಅಲ್ಲಿ ನೀನು ಇಲ್ಲಿ ನಾನು
ಎಲ್ಲ ಮನದ ಇಂಗಿತ
ಅರಿತು ನೀನು ಬೆರೆತು ನಾನು
ಒಲವ ಶರಧಿಲೀಜುವ.

CC-0. In Public Domain. Digitization by eGangotri

ಕಲ್ಪಿತೆ

ಭಾವಬಿಂಬಿತ ಚೆಲುವೆ
ಬಯಕೆಗಳ ಮಾಲೆ
ನೆನಪಿನ ಮೊಗ್ಗಲಿ ಮಲಗಿ
ಬಿರಿದು ಪರಿಮಳ ಸೂಸೆ
ಭಾವದಲಿ ಮೂಡಿದೊಂದೊಂದು
ಅಮೃತ ಬಿಂದು
ಚಂದ್ರಮನ ಚಂದ್ರಿಕೆಯು
ತಿಳಿನಗೆಗೆ ಸರಿಮಿಗಿಲು
ಕನಸನು ಕಾಣುವ
ಕಲ್ಪಿತ ಚತುರೆ
ಮನದಾಳದ ಬಳ್ಳಿ
ಚಲ್ಲವರಿದು
ದಾಂಗುಡಿಯಿಡಲು
ಚೆಂದಳಿರ ಚೆಲ್ವಿಕೆಯ
ಕರನೀಡಿ, ಅಪ್ಪಿ
ಆಶ್ರಯ ಬಯಸಲು
ಭಾವದೇಗುಲದ
ಮೂರ್ತಿಯು ಮನದಿ
ಕಾಣುತ, ಪ್ರೀತಿ,
ಪುಷ್ಪವ ಹಿಡಿದು
ಮುದಗೊಂಡಿಹಳು
ಮುಗುದೆ.

CC-0. In Public Domain. Digitization by eGangotri

ನೆನಪು

ಜೀವದಾಳದಲಿ ಪುಟಿವ ಬಯಕೆಗಳು
ಬದುಕಿನ ಗರ್ಭವನು
ಸೀಳಿ ಹೊರಜಗವ, ಕಾಣಬಯಸುವ
ಬೆಳಕಂತೆ, ನನಗೆ, ನನ್ನೂರ ನೆನಪು.

ಹಳ್ಳಿಯ ಹೊಲ ಬೇಲಿಗಳಲಿ
ಹೊಸ ರಂಗೇರಿ ಅರಳಿದ ಹೂಗಳು
ಕಂಪ ಸೂಸುತಿರೆ, ಹಾಡುತಿದೆ
ಹೃದಯ, ಹಳ್ಳಿ ಸೊಬಗನು ನೆನೆದು.

ತಿಳಿನೀಲ ಬಾಂದಳದಿ
ನೂರು ಬೆಳ್ಳಕ್ಕಿಗಳು
ಗೆರೆಕಟ್ಟಿ ಹಾಯುತಿರೆ
ಲಾಲಿಸಿದೆ ಮನಸು ಕೊರಳಿನಿಂಚರವ.

ಮುಂಗಾರು ಮಳೆಗೆದ್ದ
ಹಸಿರು ಗರಿಕೆಯ ಕುಡಿಯ
ಕುರಿ ತಿಂದು ನೆಗೆಯುತಿರೆ.
ಉಕ್ಕುವುದು ಎದೆಯಲ್ಲಿ ಒಲವು.

ಹಸಿರು ಹೊಲಗಳ ನಡುವೆ
ಚಿತ್ತಾರದಿ ಬಿತ್ತರಗೊಂಡ
ವನಸಿರಿಯ ಕಂಡು
ಸಿರಿ ಮನವು ಸೂರೆಗೊಳ್ಳುತ್ತಿದೆ.

ಮನದ ಚೆಲುವಿನ ಗೆಳತಿಯ
ಹೊಳೆವ ಚಿಗರೆಯ ಕಣ್ಣುಗಳು
ನೋಡಿ ನೂಡುತಿರೆ, ಮೂಡುವುದು
ಹೊಸ ಕವನ ಹೃದಯದಾಳದಲ್ಲಿ.

CC-0. In Public Domain. Digitization by eGangotri

ನಿಧಿ

ಯೌವನದ ಸಿರಿ ಸಂಪತ್ತು
ಇದ್ದಷ್ಟು ನೀ ಚೆಲುವೆ
ಆದರಿಸುವರು ನಿನ್ನ
ದೇವಕನ್ಯೆಯೆಂದು
ಆ
ದ
ರೆ
ಯೌವನದ ಸೌರಭವು ಮಂಕಾಗೆ
ನೀರಿಲ್ಲದ ಕೆರೆ ಎಂದು
ನೀರಸ ಭಾವ ಮೂಡುವುದು.
ಕವಿಮಾತ – ಹೇಳುವುದೇ
ನಿಜಸ್ನೇಹದ ಕಂಪು ಬಾಡದು
ಧನದ ಸಿರಿಗೆ ಬಾಗದೆ
ಮನದ ಸಿರಿಗೆ ಹಿಗ್ಗುತ
ಬಾಳಸವಿಯ ಪಡೆವುದೇ
ಸ್ನೇಹ ಸಂಪತ್ತು.

CC-0. In Public Domain. Digitization by eGangotri

ನಿರ್ಲಿಪ್ತರು

ಪಾಳು ದೇಗುಲದ ಮೂಲೆಯಲಿ
ಹರಕು ಗೋಣಿಯ ಮೇಲೊರಗಿ
ನಾಳಿನ ಚಿಂತೆಯು ಬಯಸದೆ
ಗೊರಕೆಯ ಹೊಡೆಯುವವರು
ದಿನದ ಅನ್ನವ ಪಡೆದು
ಕೈಗಳೆರಡನು ಕೂಡಿಸಿ
ತೊಡೆಗಳ ನಡುವಿಟ್ಟು
ಬದುಕಿದವರು
ಪಕ್ಕದ ಮನೆಯ ಮಂಚದ
ಕನಸ ಕಾಣುವರಲ್ಲ
ನೆರೆಯ ಜನಕೆ ಚಿಂತೆ ಕೊಟ್ಟವರಲ್ಲ
ರಾಜಕೀಯದ ಏರಿಳಿತ ಬೇಕಿಲ್ಲ
ದೇಶದುನ್ನತಿಯ ಬಯಕೆ
ಮನದಲಿಲ್ಲ
ಬರಗಾಲದ ಪೀಡೆ ಕಾಡುತಿರೆ
ಪಡಿತರ ಚೀಟಿಯು ಬೇಕಿಲ್ಲ
ಮೇಲೇರುವ ಆಸೆಯೂ ಇಲ್ಲ
ಆಸ್ತಿ ಮಾಡುವ ಪಿತ್ತ ನೆತ್ತಿಯಲಿಲ್ಲ
ಭಯದ ಬದುಕಿಲ್ಲ
ಯಾರ ಹಂಗೂ ಇಲ್ಲ
ನಡೆದದ್ದೇ ದಾರಿ
ಇದ್ದದ್ದೇ ಊರು.

ಆಸೆ

ಫಲಭರಿತ ಮಾಮರದಲಿ
ಸೊಂಪಾಗಿ ಬಿರಿದಂಥ ಹಣ್ಣೆರಡು
ನೋಡಲು ಸೊಗಸಿರಲು
ಯಾವುದೋ ನೆನಪು ಕಾಡಿತು
ನಮ್ಮೂರ ಚೆಲುವೆ
ಹದಿಹರೆಯಕೆ ಬಂದು
ನಮ್ಮ ನೋಡಿದಾಗ
ಹಣ್ಣಿನ ನೆನಪಾಯಿತು
ಸವಿವ ಬಯಕೆಗಾಗಿ
ಕೈಹಾಕುವಾಗ
ಸುತ್ತು ಬೇಲಿ
ಕಚ್ಚಿದ ಕಂಡು
ಮನ ದುಗುಡಗೊಂಡಿತು.

CC-0. In Public Domain. Digitization by eGangotri

CC-0. In Public Domain. Digitization by eGangotri

ಪ್ರಜ್ಞೆ

ಅರಿಯದ ಜನಕೇನು ಗೊತ್ತು
ನಿಜ ಬಾಳಿನ ಜೀವಂತ ಪ್ರಜ್ಞೆ
ದಿನಕ್ಕೊಮ್ಮೆ ಕ್ರಮಬದ್ಧವಾಗಿ
ನಡೆಯುವವರಿಗೆ
ಎಲ್ಲೋ ಕಲಿತ ನಾಕಕ್ಷರದ ತಿಳಿವು
ಅಷ್ಟರಲ್ಲೇ ನಾ ಜ್ಞಾನಿ ಎಂದರಿತು
ಮೆಚ್ಚಿಸಿದ ಸಂಭ್ರಮ
ಪಂಜರದ ನವಿಲಂತೆ ಗರಿಗೆದರಿ
ಕುಣಿವ ವಿಭ್ರಮ

CC-0. In Public Domain. Digitization by eGangotri

ಕೊಡುಗೆ

ಮುಸ್ಸಂಜೆಯಲಿ ಬಂದೆ ನೀನು
ಬೇಸರದ ಬದುಕಿನಲಿ
ಚಿಕ್ಕೆ ಮೂಡಿದಂತೆ
ಬಯಸಿದಾ ಮನಕೆ
ಚಂದ್ರಮನು ಉದಿಸಿದಂತೆ
ತನು ತುಂಬಾ ನೀನೆರೆದೆ
ಚಂದ್ರಮನ ಚೆಲ್ವಿಕೆಯ
ಚಂದ್ರಿಕೆಯು
ಜೇನಹೊಳೆಯಾಗಿ ನಮ್ಮಲ್ಲಿ
ಸವಿದಷ್ಟು ಕೊನೆಯಿಲ್ಲ
ಪ್ರೀತಿಗೆ ಕಡೆಯಿಲ್ಲ
ಎಂಬಂತೆ ಸಾಗಿರಲು
ಅಲ್ಲಿಂದಿಲ್ಲಿಗೆ, ಇಲ್ಲಿಂದಲ್ಲಿಗೆ
ಅಲೆವ ಮನಗಳ
ಭಾವಬಿಂಬವಾಗಿದೆ ಪ್ರೀತಿ.

CC-0. In Public Domain. Digitization by eGangotri

ತಿದ್ದುಪಡಿ

ತಪ್ಪು	ಒಪ್ಪು	ಪುಟ	ಸಾಲು
ಮಕುಟ	ಮುಕುಟ	6	9
ಬಿಟ್ಟಿಹದು	ಬಿಟ್ಟಿಹುದು	9	14
ಮಡಕೆಯಿಲ್ಲಿ	ಮಡಕೆಯಲ್ಲಿ	17	8
ಸಾಲುಗಾರರೋ	ಸಾಲಗಾರರೋ	20	12
ಇವರೆ	ಇವರೇ	26	17
ಮಣ್ಣಿಲಿ	ಮಣ್ಣಾಲಿ	26	11
ಇರುವರೆಲ್ಲಡೆ	ಇರುವರೆಲ್ಲೆಡೆ	29	21
ಮೃಗವಾದರು	ಮೃಗವಾದವರು	30	8
ಬರಿದ	ಬಿರಿದ	35	2
ಚಿನ್ಹೆ	ಚಿಹ್ನೆ	36	12
ನಾಡಳೆಲ್ಲರೂ	ನಾಡೊಳೆಲ್ಲರೂ	39	13

CC-0. In Public Domain. Digitization by eGangotri

CC-0. In Public Domain. Digitization by eGangotri

ದ. ರಾಜಣ್ಣನವರ ಪ್ರಥಮ ಕವನ ಸಂಕಲನ 'ಗಿರಿಸ್ಪಂದನ' ನಿಮ್ಮ ಮುಂದಿದೆ. ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ಸಮೀಪದ ದಂದೂರು, ಶ್ರೀಯುತರ ಹುಟ್ಟೂರು. ಬಾಲ್ಯದಲ್ಲಿ ಗ್ರಾಮೀಣ ಬದುಕನ್ನು ನೇರವಾಗಿ ದರ್ಶಿಸಿದವರು. ಮುಂದೆ ಎಂ. ಎ., ಬಿ. ಎಡ್. ಪದವಿಗಳನ್ನು ಗಳಿಸಿ, ಈಗ ಮಲೆನಾಡಿನ ಹೃದಯವೆನಿಸಿದ ಶೃಂಗೇರಿಯಲ್ಲಿ, ಶ್ರೀ ಜಗದ್ಗುರು ಅಭಿನವ ವಿದ್ಯಾತೀರ್ಥ ಬಾಲಿಕಾ ಪ್ರೌಢಶಾಲೆಯ ಕನ್ನಡ ಅಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಮಲೆನಾಡಿನ ನಿಸರ್ಗ, ಸಾಮಾಜಿಕ ಬದುಕಿನ ಏಳುಬೀಳುಗಳು, ನಮ್ಮ ಇತಿಹಾಸ — ಹೀಗೆ ಬದುಕಿನ ಹಲವು ಹತ್ತು ಸಂಗತಿಗಳು ಈ ತರುಣ ಕವಿಯ ಭಾವವನ್ನು ಸ್ಪಂದಿಸಿವೆ. ಬದುಕಿನ ಹಲವು ಮುಖಗಳಿಂದ ಪಡೆದ ಅನುಭವಗಳಿಗೆ ಅಭಿವ್ಯಕ್ತಿ ನೀಡುವ ತೀವ್ರ ಹಂಬಲ ಇವರಿಗಿದೆ. ಪ್ರಕಾಶನದ ಹೊಣೆಯನ್ನೂ ಹೊತ್ತಿರುವುದು ಶ್ರೀಯುತರ ಸಾಹಿತ್ಯಕ ಕಾಳಜಿಗೆ ಸಾಕ್ಷಿಯಾಗಿದೆ. ಇದಕ್ಕೆ ಸಹೃದಯರು ತೋರಬೇಕಾದ ಸೂಕ್ತ ಪ್ರತಿಕ್ರಿಯೆ ಎಂದರೆ ಈ ಕೃತಿಯನ್ನು ಮುಕ್ತ ಮನಸ್ಸಿನಿಂದ ಸ್ವಾಗತಿಸುವುದು. ಆಗ ದ. ರಾಜಣ್ಣ ಅವರ ಈ ಪುಟ್ಟ ಹೆಜ್ಜೆ ದಿಟ್ಟ ಹೆಜ್ಜೆಯಾದೀತು.

ವಿಮರ್ಶೆಯ ಮಾನದಂಡದಿಂದ ಅಳೆಯುವುದು ಈ ಪರಿಚಯಿಸುವ ನಾಲ್ಕು ನುಡಿಯ ಉದ್ದೇಶವಲ್ಲ. ಆದರೆ ಪುರೋಗಾಮಿ ಚಿಂತನೆಯ ಅಂಶಗಳು ಈ ಕವನ ಸಂಕಲನದಲ್ಲಿ ಸುಳುಹು ದೋರಿರುವುದು ಬೆಳೆಯುವ ಮನಸ್ಸಿನ ಕುರುಹು ಎನ್ನಬೇಕಾಗುತ್ತದೆ. ಕಾವ್ಯ ಶಿಲ್ಪದ ಪ್ರಬುದ್ಧತೆಯತ್ತ ಈ ತರುಣ ಕವಿ ಬೆಳೆಯುವ ಭರವಸೆಯನ್ನು ಇಲ್ಲಿಯ ಕವನಗಳು ನೀಡುತ್ತವೆ ಎಂಬುದರಲ್ಲಿ ಸಂದೇಹವಿಲ್ಲ. ಅವರಿಗೆ ಓದುಗರ ಬೆಂಬಲವೇ ಎಲ್ಲ ಬಗೆಯ ಶುಭ ಹಾರೈಕೆ ಎಂದು ನಂಬಿದ್ದೇನೆ.

ಕೆ. ಪುಟ್ಟಯ್ಯ, ಎಂ. ಎ., ಎಂ. ಫಿಲ್.,
ರೀಡರ್, ಕನ್ನಡ ವಿಭಾಗ
ಶ್ರೀ ಜೆ. ಸಿ. ಬಿ. ಎಂ. ಕಾಲೇಜು, ಶೃಂಗೇರಿ